A.—**The Hon'ble Sri T. MARIAPPA** (Home Minister).—

(*a*) Twelve.

(*b*) Farms sponsored by the Government :—

1. Arehalli, Holalkere Taluk.
2. Talikatte, Holalkere Taluk.
3. Vonakemaradi, Holalkere Taluk.

These three Farms are treated as one unit for purposes of financial assistance from the Government :—

4. Uddur, Hunsur Taluk.
5. Kumbhapur, Ramanagaram Taluk.
6. Halaganahalli, Goribidnur Taluk.

Other Farms :—

7. Belagumba, Magadi Taluk.
8. Madaku Hosahalli, Chikballapur Taluk.
9. Kortikere, Arakalgud Taluk.
10. Manjenahalli, Hassan Taluk.
11. Habbanaghatta, Arsikere Taluk.
12. Mullegal, Bangalore North Taluk.

(*c*) The following facilities have been provided to the Co-operative Farming Societies sponsored by Government :—

1. An advance of Rs. 25,000 per farm for 4 farms, of which Rs. 8,500 is an outright grant and the remaining Rs. 16,500 is a loan free of interest, repayable in five annual instalments from the produce to be surrendered by the farmers at one palla of ragi or jola or two pallas of paddy per acre.

2. Large and extensive tracts of Amrit Mahal Kaval and forest lands and also date groves have been released for the purpose of forming Co-operative Farming Societies and the lease amount at Re. 0-8-0 per acre on lands released has been waived for a period of one year.

3. Formation of sites and digging wells out of Rural Development Funds and grant of building materials free of cost from Government forests.

4. Lending the services of Agricultural Inspectors for employment as Secretaries of the Farming Societies.

5. Permitting the local Revenue Sub-Division Officers to serve as *Ex-officio* Presidents of these societies.

In respect of Belagumba Grow More Food Co-operative Society which is not sponsored by Government, a loan of Rs. 1,000 has been advanced.

Expression of thanks for Condolence Resolution re : Demise of Sardar Vallabhbhai Patel.

ಅಧ್ಯಕ್ಷರು (The Hon'ble Sri V. Venkatappa).—ಈ ಸಭೆಯವರು ಮಾನ್ಯ ಶ್ರೀ ಸರ್ದಾರ್ ವಲ್ಲಭಭಾಯ್ ಪಟೇಲರವರ ನಿಧನದ ಬಗ್ಗೆ ಕಳುಹಿಸಿದ್ದ ನಿರ್ಣಯದ ಬಗ್ಗೆ ಶ್ರೀಮತಿ ಮಣಿಬೆನ್ ಪಟೇಲರವರು ಈ ರೀತಿ ಕಾಗದ ಬರೆದಿದ್ದಾರೆ :—

Dear Mr. Speaker.—

"Thank you for your letter dated 18th January 1951 with which you enclosed the resolution moved by Sri K. Chengalaraya Reddy and unanimously adopted by the Mysore Legislative Assembly on the death of my father. Kindly convey to the House my sincere thanks for the resolution and the kind sentiments it contained".

Programme of Business for the remaining days.

* **The Hon'ble Sri K. CHENGALARAYA REDDY** (Leader of the House).—Mr. Speaker, I want to make two proposals regarding the business of the Session during the remaining days. The first is with respect to the business on the 30th instant, that is tomorrow. We have got to consider the Appropriation Bill in the first instance and then proceed to consider the report of the Public Accounts Committee. It has been desired that we should set apart some time for discussion of the food situation. I propose therefore that if the business set out in the Agenda tomorrow is over, we may take up discussion, on a consideration motion to be moved by the Government, on the food situation. It is hoped that the two items on the Agenda for tomorrow will be over by about the lunch interval. We are prepared to sit for a longer time tomorrow. I have no objection to sit as

* Speech not revised by the Member

(THE HON'BLE SRI K. CHENGALARAYA REDDY).

long as the House desires to sit and discuss the food situation in all its aspects.

Sri L. SIDDAPPA (Shimoga District—General).—We will have to sit as usual till 10 of the Clock in the night!

The Hon'ble Sri K. CHENGALARAYA REDDY.—I have no objection. I am prepared to sit even the whole night if the House desires, because it is a subject to be discussed.

Mushir-ul-Mulk J. MOHAMED IMAM (Chitaldrug *cum* Tumkur—Muslim).—We get salary from the Government. So we have to sit.

The Hon'ble Sri K. CHENGALARAYA REDDY.—Not yet. You will not get salary for tomorrow. I can assure you that. You may get salary subsequently, but not for tomorrow. Your conscience can be quite at ease on that matter tomorrow.

The second proposal of mine is this. On the 1st of February 1951 I propose to sit in the forenoon instead of during the usual hours. That will enable some of us to keep to certain other engagements at Mysore. So if the House is agreeable we may have a morning Session on 1st February 1951. I have already indicated on an earlier occasion that it would not be possible to extend the Session for several reasons. That is why I am suggesting a debate on the food situation tomorrow, even if it may necessitate us to sit for longer hours.

Sri L. SIDDAPPA.—Some Bills were referred to Select Committees. Will they be taken up during this Session?

The Hon'ble Sri K. CHENGALARAYA REDDY.—No. I may also indicate without any commitment on my part that it is expected that we may meet in the latter part of the second week of March for the consideration of the Budget estimates. If possible, we shall meet in the earlier part of the second week of March for the consideration of the Budget estimates. The idea is to complete the Budget before the end of March and the Assembly may break up for a fortnight adjourning, not proroguing. Then we may meet again after the recess for a week or fortnight as exigencies of the business may demand and take up legislative business in the latter part of April.

DEMANDS FOR SUPPLEMENTARY GRANTS FOR 1950-51.

Mr. SPEAKER (The Hon'ble Sri V. Venkatappa).—The Hon'ble Home Minister will now move his Demand.

Demand No. 14.-20. Police.

Sri T. MARIAPPA (Home Minister).—Sir, on the recommendation of His Highness the Maharaja, I beg to move:

"That a supplementary sum not exceeding Rs. 7,55,500 be granted to the Government to defray the charges which will come in course of payment during the year ending 31st day of March 1951, in respect of 'Police'."

Mr. SPEAKER.—Motion moved:

"That a supplementary sum not exceeding Rs. 7,55,500 be granted to the Government to defray the charges which will come in course of payment during the year ending 31st day of March 1951, in respect of 'Police'."

Working of Prohibition Scheme in the State.

***Mushir-ul-Mulk J. MOHAMED IMAM** (Tumkur *cum* Chitaldrug Muslim).—Sir, I beg to move:

"That the Demand under the head '20 Police' for Rs. 7,55,500 be reduced by Rs. 100 (to know the details of staff employed and to ascertain how Prohibition has become successful of which the enforcement was entrusted to the Police Department)."

Sir, before I proceed further, I would like to ask for some clarification. The Demand as was just moved by the Hon'ble Minister is for Rs. 7,55,500 and the details given in the statement of Supplementary Estimates do not seem to tally with this figure. The details given in the statement are as follows:

Salaries	...	...
Police force	...	..
Establishment	...	2,36,000
Travelling Allowance	...	35,000
Equipment and Clothing	...	32,500
Rewards for Good Service and secret service	...	50,000
Contingencies	...	75,000

*Speech not revised by the Member.

All these items come to about Rs. 4,28,500. But there are two items shown as '2,27,000 and 1,00,000'. If the total of these two items is deducted out of the former figure, the figure will be reduced by nearly half. I therefore request the Hon'ble Minister to explain this point.

The Hon'ble Sri T. MARIAPPA.—Sir, it is true that these figures complicate the matter a bit. Therefore I would like to draw the attention of the Hon'ble Member to page 92 of the Budget for 1950-51. The Hon'ble Member will find on that page the entire grant for the Police Department. It was put down at Rs. 85,63,700 of which deduct charges of ordinary police transferred to the Supervision of Mines, Rs. 1,86,700, deduct charges for Railway Police Rs. 2,27,000 and probable savings Rs. 1,00,000. Sir, at the time of framing the Budget, we expected these three items to be met from other sources, namely Supervision of Mines and other charges to come under that head, and charges under the railway police to be reimbursed by the Government of India and there would be probable savings of Rs. 1,00,000. But what happened during the course of the year is that our expectations were not fulfilled with regard to the grant from the Government of India. After the integration of the Railways, we have been corresponding with the Government of India that it is legitimate charge on the railway revenue. But Sir, they have not been able to agree to the entire sum of Rs. 2,27,000 and therefore the matter is still under negotiation. It is expected that more than 50 per cent of the charges we incur is likely to be reimbursed by the Government of India. With regard to the rest, they are contending that maintenance of law and order within the State limits should legitimately come as a charge against the revenue of the State and with regard to the other charges, on the principle that has been accepted by the other States, the Government of India would meet that portion only. Therefore the whole matter is under negotiation. In any case we have to pay the staff and it cannot be met under any allotment in the Budget. Therefore, as I said, these two items of minus have become plus. This is a matter for the Finance Department to explain more fully. But I believe I have given a correct explanation that we have to incur this expenditure. The House had not given approval to this particular item because in the Budget grant it had been deducted. But we however wanted to effect a saving of one lakh, as shown in the Budget. Government have decided to save one lakh of rupees out of the total grant given to the Police. We tried to save this under 20 Police. But we have not been able to do so. Therefore we have cut down expenditure under buildings so as to effect a saving of one lakh out of money allotted for police buildings, and so what was expected has been saved under the grant allotted for the construction of buildings. With regard to the amount of Rs. 4,28,000, this is an expenditure over the staff required for prohibition work.

Sri S. RANGARAMIAH (Mysore District—General).—Sir, there is a sum of Rs. 2,36,000 shown against items 'salaries, police Force, establishment. I request the Hon'ble Minister to give details about these three items which make up Rs. 2,36,000.

The Hon'ble Sri T. MARIAPPA.—This amount purely relates to the establishment: Assistant Superintendents of Police, Inspectors, Sub-Inspectors, Daffedars and about 324 Constables. The total charges come to Rs. 4,28,000.

Janab J. MOHAMED IMAM.—Sir, this is an instance of very bad budgeting to which I will advert later. The figures are entirely and thoroughly confusing. Whatever was anticipated at the time of framing the Budget has been negatived. This is not the only instance of its kind. There are some more instances and I will refer to them on other occasions. But anyhow, we are told that the Minister wants an additional grant of Rs. 7,55,500, out of which Rs. 4,28,000 goes to special police that has been employed on the enforcement of prohibition. Sir, the question now is whether this amount

(JANAB J. MOHAMED IMAM.)

that has been spent has been utilised profitably and to the advantage of the State. So far as Prohibition is concerned, Hon'ble Members will remember that prohibition was introduced soon after this popular ministry took charge of the administration. Well Sir, I too had a hand as Chairman of the Prohibition Committee to give certain ideas to the Government as to how prohibition should be implemented within the State and in what form it should be introduced. Sir, the report of the Prohibition Committee was adopted by the then Government which preceded this Government and the scheme that was envisaged in that report was introduced in the State. Perhaps, many members have studied that scheme. It was not the same as is now prevailing but it was a scheme which aimed at the gradual introduction of prohibition within the State by stages. It was a different scheme and it was an experiment which many of us thought was worth trying. But when this Ministry came to power that scheme was given up and with all the enthusiasm, and zeal that prohibition should be introduced throughout the State within three years, they introduced wholesale and total prohibition in three districts in the first year. These three districts were completely rendered dry in the first year and the programme was to extend it to another three districts during the next year and during the third year to make the whole State dry. Sir, nearly three years have passed by but their enthusiasm was checked in the first year alone. There were repeated demands and requests by the members to extend prohibition to the other districts.

Mr. SPEAKER.—In the cut-motion the Hon'ble Member only wants to know how far the staff has been successful in the work of prohibition.

Janab J. MOHAMED IMAM.—I may not confine to that particular point. I must also say how it is working and how it worked before. It is for the benefit of the Government and the country to know the difficulties. I will have to say these preliminary things by way of introduction.

The Government gave up this idea and stopped with five districts and the remaining most important districts remain quite wet. Perhaps the Ministers did not think of it when they introduced this system of prohibition. When they want to implement a certain policy they must take into consideration all the aspects. When they want to introduce this scheme they must know which agency would be able to deal with the problem of prohibition successfully. Secondly, they must also know what would be the cost of enforcing prohibition. We have given it in our report and this Ministry did not think of it. They said that prohibition would be successful with the then existing excise staff. This work was entrusted to the then excise staff and I must say that that excise staff did not get much help or did not have any facility to enforce prohibition. Whatever staff was available and whatever staff was retrenched was again re-employed. During that time prohibition was an absolute failure. The Government admitted it.

The Hon'ble Sri K. CHENGALARAYA REDDY (Chief Minister).—We never admitted that it was an absolute failure. It was put to our mouth. We did not say so.

Janab J. MOHAMED IMAM.—The very fact that the enforcement of prohibition was transferred from the Excise Department to the Police Department showed that the Government felt that it was not possible for the Excise Department to cope with the enforcement of prohibition.

The Hon'ble Sri K. CHENGALARAYA REDDY.—That is different from saying that prohibition was an absolute failure.

Janab J. MOHAMED IMAM.—Can I not draw my own inference ?

Mr. SPEAKER.—But the Hon'ble Member said that Government admitted it.

Janab J. MOHAMED IMAM.—I will draw my own inference. On account of these facts Government must have admitted that it is a failure.

Sri L. SIDDAPPA (Shimoga District —General).—If not to-day, they will admit their failure some time hence.

Janab J. MOHAMED IMAM.—What happened during that time? Prohibition proved a curse in the areas where this was introduced. A lot of illicit distillation.....

Mr. SPEAKER.—The Hon'ble Member cannot go on discussing the whole prohibition question on this cut motion. He can refer to those matters for which the amount is asked for.

Janab J. MOHAMED IMAM.—I am only referring to the enforcement of prohibition and I am entitled to say that even this scheme has proved a failure.

Mr. SPEAKER.—The Hon'ble Member is not entitled to say all these things on the present cut motion.

The Hon'ble Sri T. MARIAPPA.—May I submit that this is not a demand under "Excise" but a deamnd under "Police" regarding the staff engaged for prohibition work?

Mr. SPEAKER.—The Hon'ble Member can say how far this staff is helpful or not.

The Hon'ble Sri K. CHENGALARAYA REDDY.—May I say that there is a resolution on this subject which may come up for discussion?

Janab J. MOHAMED IMAM.—Yes, it is 50th or 51st in the ballotted list. This staff was employed mainly to enforce prohibition and so I am entitled to say whether this staff is successful in enforcing prohibition.

Mr. SPEAKER.—Which staff?

Janab J. MOHAMED IMAM.—Police staff.

Mr. SPEAKER.—The Hon'ble Member may speak of the police staff.

Janab J. MOHAMED IMAM.—These are preliminary matters. When the excise staff was employed it was a perfect failure and then the Government thought that they would succeed in enforcing prohibition if they employed police staff. When this work was transferred to the Police Department I do not know on what grounds they came to this conclusion.

Mr. SPEAKER.—The Hon'be Member was saying hitherto that the Excise Department was not capable of coping with prohibition work and that they were insufficient!

Janab J. MOHAMED IMAM.—That may be one of the reasons. There are various other reasons; whether enforcement of prohibition by police proved successful in other States or the way it is done; whether it is a costlier scheme—all these things have to be considered. When the Government announced the policy of entrusting this work to the Police Department, they did not disclose before this House the financial implications. Before the Budget was presented they ought to have worked out and anticipated what the extra expenditure would be or what further commitments would be by entrusting it to the Police staff. They did not do it. They did not include it in the Budget under "Police". On the other hand they showed two main items of savings and now they are coming forward with a big amount and ask us to vote for it. At that time we were under the impression that prohibition would be carried out by the existing Police staff and we thought that in the respective areas there would be mutual adjustment, *i.e.* the excise staff would be transferred to the Police Department and the work would be carried on with the existing staff. But now, Sir, after 8 or 9 months we are surprised to see that a huge amount of Rs. 4,28,000 is being spent on police with a view to enforce prohibition. This is rather, I must say, very costly item, very big item, especially in these days when we are hard up for money, when we are doing our best to curtail expenditure and when we are trying every effort to find out new sources.

The Hon'ble Sri K. CHENGALARAYA REDDY.—Prohibition is a costly experiment.

Janab J. MOHAMED IMAM.—I am glad he made that statement.

The Hon'ble Sri K. CHENGALARAYA REDDY.—But worthwhile.

Janab J. MOHAMED IMAM.—I would be very glad to ask the people to submit to this expenditure provided the benefits are correspondingly of beneficial nature. Now, Sir, what is the result of

(JANAB MOHAMED IMAM.)

prohibition? How is it working in the prohibition area after the work was entrusted to the police? I am sure that many members who are living in dry areas, will agree with me that matters have not improved. I must say with all the responsibility at my command that on the other hand they have gone from bad to worse. Illicit distillation is rampant and it would not be an exaggeration if I say that in every taluk large numbers of people in the villages are engaged in illicit distillation. I am saying this in the interest of the country and it is my duty to disclose whatever I have seen. Illicit distillation is very rampant. Formerly, when there was no prohibition there was probably one arrack shop in a particular area. But now, there are any number in every village. I have got definite information that many people are engaged in manufacturing and selling this illicit arrack.

The Hon'ble Sri T. MARIAPPA.—When the Hon'ble Member says he has got information, will he please place on information to us?

Sri L. SIDDAPPA.—For the fear of being murdered we are not prepared to pass on the information.

Sri G. A. ACHARYA (Bangalore District—General).—I wish to be enlightened whether the Member is so afraid of such a thing because he said that he was not prepared to give information due to the fear that he may be murdered.

Janab J. MOHAMED IMAM.—Sir, I may tell an interesting incident which happened during Moharrum. Three or four persons were drunk and when I asked them 'why did you drink'? they said, "ನೀನೇ ಮಾಡಿದ್ದು ಇದೆಲ್ಲಾ ವಾಪಸ್ಸು ತೆಗೆದುಕೊಳ್ಳುತ್ತೀಯೋ ಇಲ್ಲವೋ" ಎಂದು. They threatened me.

ಶ್ರೀ ಎಸ್. ರಂಗಗಾಮಯ್ಯನವರು (ಮೈಸೂರು ಜಿಲ್ಲೆ).—ಗಾಂಧಿ ಟೋಪಿ ಹಾಕಿದ್ದಿರೋ ನೀವು?

Janab J. MOHAMED IMAM.—That is a different matter. "ಯಾವುದೂ ಬೇಡ. ನನಗೀಗ ಹೊಟ್ಟೆಗಿಲ್ಲ ಹೆಂಡ ತಂದುಕೊಟ್ಟ ದಿವಸ ಏನು ಬೇಕಾದರೂ ಮಾಡುತ್ತೇನೆ. ಎಂದು ಹೇಳಿದ".

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತರಿಸಿ ಕೊಟ್ಟಿರೋ ನೀವು.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಅವನ ಉದ್ದೇಶ, ಮಿನಿಸ್ಟರ್ ಸಿದ್ದಯ್ಯನವರಿಗೆ ನಾನು ಹೋಗಿಹೇಳಲ, ಅವರು ಹೆಂಡ ತರಿಸಿಕೊಡಲು ಎಂದು. Matters are worse now than what they were before. Illicit manufacturing of arrack prevails in every house in a village; and not only this, there are people regularly trading and making money out of this.

Sri S. RANGARAMIAH.—Does the Hon'ble Member suggest that the staff is inadequate and therefore more staff should be employed?

Janab J. MOHAMED IMAM.—Do not anticipate what I may say. Please listen to me. So, Sir, the enforcement of prohibition through the police has not helped matters in any way and on the other hand matters are worsening. I know that the Government did enforce prohibition with good intention. They wanted to make everybody an angel. But in this age of 'Kali Yuga' it is imposible to make everybody an angel. (Laughter). Now, what I want to say is this. You should take the facts and the existing affairs into consideration and see what to do. The policy of prohibition in parts of the State was introduced. We tried the excise staff for this purpose and now we are trying the police staff. The matters have not improved. On the other hand, if you go on increasing the police staff, you will have to spend a good deal of money and this is a costly experiment as the Hon'ble Chief Minister himself said. At this stage it is not possible to have this costly experiment. We want more money and more revenues because finances are bad. Therefore, I submit to the Hon'ble Execise Minister to appoint a small committee to examine the working of prohibition in all its aspects and to discuss thoroughly the future policy and find out impartially how far prohibition has worked successfully and how far it has proved beneficial to the society at large. I make this suggestion for the consideration of the Government and of the Excise Minister, and the Police Minister. Let the Government go into all this and see if there is any necessity for a change in the policy of adopting a further measure.

This year they have spent Rs. 4½ lakhs. Next year, they may raise it to Rs. 8 lakhs and then to Rs. 20 lakhs and then to one crore of rupees. I may tell you, even then, prohibition will not be successful. So, I wish that the whole thing is examined. This is a matter for the consideration of the Government.

Mr. SPEAKER.—Cut Motion moved :

"That the demand under the head "20. Police" reduced by Rs. 100."

* ರಾಜಮಂತ್ರಪ್ರವೀಣ ಶ್ರೀ ಎಚ್. ಬಿ. ಗುಂಡಪ್ಪಗೌಡರು (ಹಾನನ ಜೆಲ್ಲೆ) —ಮಾನ್ಯ ಅಧ್ಯಕ್ಷರೇ, ಪಾನನಿರೋಧದ ವಿಚಾರದಲ್ಲಿ ಜನಾಬ್ ಇಮಾಂರವರು ಕೆಲವು ವಿಷಯಗಳನ್ನು ಚರ್ಚಿಸಿದ್ದಾರೆ. ಈಗ ನಮ್ಮ ಮುಂದಿರುವ ಪ್ರಶ್ನೆ ಪಾನನಿರೋಧದ ಸಂಬಂಧದಲ್ಲಿ ನಡೆಯುತ್ತಿರತಕ್ಕ ಕಳ್ಳ ಬಟ್ಟಿ ಇಳಿಸುವುದನ್ನು ತಡೆಯುವುದಕ್ಕೆ ಮತ್ತು ಇತರೇ ಕಾರ್ಯಾಚರಣೆಗಳನ್ನು ನಡೆಸುವುದಕ್ಕೆ ಪೋಲೀಸ್ ಸಿಬ್ಬಂದಿಯನ್ನು ಇಟ್ಟುಕೊಂಡಿರಬೇಕಾದ ವಿಷಯ. ಈ ಪಾನನಿರೋಧವನ್ನು ಜಾರಿಗೆ ತಂದಕಾಲದಲ್ಲಿ ನಮ್ಮ ಸರ್ಕಾರದವರು ಅನೇಕ ವಿಚಾರಗಳನ್ನು ಪರಿಶೀಲನೆ ಮಾಡಿಕೊಂಡೇ ಜಾರಿಗೆ ತಂದಿರುತ್ತಾರೆ. ಅದು ನಿಶ್ಚಯವಾಗಿಯೂ ಜಯಪ್ರದವಾದುದೇ ಆಗುತ್ತದೆಂದು ನಾನು ಕೂಡ ಮೊದಲು ಹೀಗೇ ಆಲೋಚನೆ ಮಾಡಿದ್ದೆ. ಆದರೆ ಇತ್ತೀಚೆಗೆ ನೋಡುವುದರಲ್ಲಿ ಇವರು ಅದನ್ನು ಜಾರಿಗೆ ತಂದ ರೀತಿ ನೀತಿಗಳು, ಅದರ ಜಯಪ್ರದಕ್ಕೆ ಅಷ್ಟು ಅನುಗುಣವಾಗಿರುತ್ತವೆಂಬುದಾಗಿ ನನಗಂತೂ ಕಂಡುಬರಲಿಲ್ಲ. ಆದರೆ ಆ ಬಗ್ಗೆ ಇವರು ಸರಿಯಾಗಿ ಆಲೋಚನೆ ಮಾಡಿದ್ದಂತೆ ಸಹ ನನಗೆ ಕಂಡು ಬರುತ್ತಿಲ್ಲ. ಇದರಲ್ಲಿ ಇವರಿಗೆ ಮುಖ್ಯವಾಗಿ ಬೇಕಾಗಿದ್ದದು ಸಾರ್ವಜನಿಕರ ಸಹಾಯ ಮತ್ತು ಸಹಕಾರ. ಅದು ಇವರಿಗೆ ಒದಗದ ಹೊರತು ಇವರು ಏನೇ ಪ್ರಯತ್ನ ಪಡಲಿ ಅದು ಖಂಡಿತಯಶಸ್ವಿಯಾಗಲಾರದೆಂದು ನಾನು ಹೇಳುತ್ತೇನೆ. ಸಮಾಜ ಸುಧಾರಣೆಗೆ ಸಮಾಜ ಸುಧಾರಕರ ಅಗತ್ಯವೆಷ್ಟಿರ ಮಟ್ಟಿಗಿರುತ್ತೆಂಬ ವಿಚಾರ ಸರ್ಕಾರಿಗೂ ತಿಳಿದಿರತಕ್ಕದ್ದೇ ಆಗಿದೆ. ಅದರ ಬಗ್ಗೆ ನಾನೇನೂ ಹೆಚ್ಚು ಹೇಳಬೇಕಾದುದಿಲ್ಲ. ಹಾಗೆ ತಾವು ಸಮಾಜ ಸುಧಾರಕರಲ್ಲಿ ಮರೆ ಹೊಕ್ಕು ಕೇಳಿಕೊಂಡಿರತಕ್ಕ ಅಂಶ ನನ್ನ ಗೋಚರಕ್ಕೇನೋ ಇಲ್ಲಿಯವರೆಗೂ ಬಂದಿಲ್ಲ. ಹೀಗೆ ಜನರನ್ನು ಒಂದು ಸನ್ಮಾರ್ಗಕ್ಕೆ ತರತಕ್ಕ ಕಾರ್ಯದಲ್ಲಿ ಸಾರ್ವಜನಿಕರಿಗಿದ್ದ ಸೌಲಭ್ಯ ಸರ್ಕಾರದ ಕಾನೂನಿನ ಬಲಕ್ಕಾಗಲೀ ಅಥವಾ ಅವರ ಶಿಬ್ಬಂದಿಯ ಬಲಕ್ಕಾಗಲೀ ಇರುವುದಿಲ್ಲ. ಹಾಗೇನಾದರೂ ತಾವು ಭಾವಿಸಿದ್ದಲ್ಲಿ ಅದು ಖಂಡಿತ ತಪ್ಪು ಅಭಿಪ್ರಾಯವೇ ಸರಿ. ಈಗ ತಾವು ಅನುಸರಿಸಿರತಕ್ಕ ರೀತಿ ನೀತಿಗಳೇ ಸರಿಯಾಗಿಲ್ಲವೆಂಬುದು ನನ್ನ ಮುಖ್ಯ ವಾದ. ಈ ಬಗ್ಗೆ ತಾವು ಸಾರ್ವಜನಿಕರ ಸಹಾಯ ಪಡೆದಿಲ್ಲ. ಈ ಬಗ್ಗೆ ತಾವು ಯಾವ ರೀತಿಯ ಪ್ರಚಾರ ಕಾರ್ಯವನ್ನೂ ಮಾಡಿಲ್ಲ. ಈ ಬಗ್ಗೆ ಯಾವ ಪತ್ರಿಕೆಗಳಲ್ಲಾಗಲೀ ತಾವು ಯಾವುದೊಂದು ವಿಚಾರವನ್ನೂ ಪ್ರಕಟಪಡಿಸುತ್ತಿಲ್ಲ. ನಾನು ಹಿಂದೆಯೇ ಈ ಸಂಬಂಧವಾಗಿ ತಾವು ಈ ಪಾನನಿರೋಧವನ್ನು ಜಾರಿಗೆ ತರುವಕಾಲದಲ್ಲಿ ತಮ್ಮ ಪ್ರಚಾರ ಕಾರ್ಯ ಯಾವ ರೀತಿ ಇರುತ್ತೆಂದು ಕೇಳಿದ್ದಕ್ಕೆ ಸರ್ಕಾರದಿಂದ ನನಗೆ ಸರಿಯಾಗಿ ಉತ್ತರವೇ ಬರಲಿಲ್ಲ. ಒಟ್ಟಿನಲ್ಲಿ ಪೋಲೀಸ್ ಶಿಬ್ಬಂದಿಯ ಬಲದಿಂದ ಪೆದರಿಸಿ ಇದನ್ನು ಸರಿಪಡಿಸುತ್ತೇವೆಂದು ತಿಳಿದಿದ್ದರೆ ಅದು ಖಂಡಿತ ಸಾಧ್ಯವಾದ್ದಲ್ಲ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜ್ ಸಚಿವರು).—ನಮ್ಮ ಭಾವನೆ ಎಂದಿಗೂ ಆ ರೀತಿಯಾಗಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಅಕ್ರಮವಾದ ಕುಡಿತ ತಯಾರಿಕೆಯನ್ನು ತಪ್ಪಿಸಲು ತಾವೇಗ ಈ ಪೋಲೀಸ್ ಶಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದೀರಿ. ಇಷ್ಟು ಏನಾ ತಾವೇನಾದರೂ ಈ ಬಗ್ಗೆ ಲೋಕಲ್ ಕಮಿಟಿಗಳನ್ನೇನಾದರೂ ನೇಮಕ ಮಾಡಿದ್ದೀರಾ ! ಅಥವಾ ಗ್ರಾಮಸ್ಥರಿಂದ ಕೂಡಿದ ಯಾವುದಾದರೂ ಸಮಿತಿಗಳನ್ನು ನೇಮಕ ಮಾಡಿದ್ದೀರಾ ? ಹೀಗೆ ಸಾರ್ವಜನಿಕರಿಗೆ ತಾವು ಯಾವ ರೂಪದಲ್ಲಿ ಅವರ ನೆರವನ್ನು ಕೊಡಬೇಕೆಂದು ಪ್ರಾರ್ಥಿಸಿದ್ದೀರಿ ? ಈ ಬಗ್ಗೆ ತಾವು ಎಷ್ಟಾವರ್ತಿ-ಸಂಚಾರ ಕೈಗೊಂಡಿದ್ದೀರಿ ? ಸುಮ್ಮನೆ ಹಣವನ್ನು ಖರ್ಚುಮಾಡತಕ್ಕದ್ದೊಂದೇ ದೊಡ್ಡಸ್ತಿಕೆಯಲ್ಲ. ತಾವು ಈ ಬಗ್ಗೆ ತಕ್ಕ ಉಪದೇಶ ಕೊಡಬಲ್ಲಂಥ ಜನಗಳನ್ನು ತಯಾರು ಮಾಡಬೇಕು. ಹಾಗೆ ಮಾಡದಿದ್ದರೆ ಇದು ಖಂಡಿತ ಸಾಧ್ಯವಾಗಲಾರದು.

ತಾವು ಈ ಬಗ್ಗೆ ಮಾಡಿರತಕ್ಕ approach ಕೂಡ ಸರಿಯಾಗಿಲ್ಲ. ತಾವು ಪೋಲೀಸ್ ಶಿಬ್ಬಂದಿಯನ್ನು ನೇಮಿಸಿಕೊಂಡಿರತಕ್ಕ ಬಗ್ಗೆ ನನ್ನ ಭಿನ್ನಾಭಿಪ್ರಾಯವೇನೂ ಇಲ್ಲ, ಇಟ್ಟುಕೊಳ್ಳಿ. ಈ ಬಗ್ಗೆ ಮದ್ರಾಸ್ ಸರ್ಕಾರದವರು ಎಷ್ಟು ಶ್ರಮಪಟ್ಟರು; ಅವರು ಇದನ್ನು ತಪ್ಪಿಸುವನಲುವಾಗಿ, ಅವರಿಗೆ ಟೀ, ಮಜ್ಜಿಗೆ ಇತ್ಯಾದಿ ಕುಡಿತಗಳನ್ನು ಒದಗಿಸಿ, ಆ ದುಷ್ಟದ್ರವ್ಯವನ್ನು ಕ್ರಮೇಣ ತಪ್ಪಿಸಲು ಸಾಧನೆ ಮಾಡಿದರು. ಆ ರೀತಿಯ ಸಾಧನೆಗಳನ್ನು ತಾವೇನು ನಡೆಸಿದ್ದೀರಿ? ಹೀಗೆ ಕೇವಲ ಒಂದು ಪೋಲೀಸ್ ಶಿಬ್ಬಂದಿಯನ್ನು ಇಟ್ಟ ಮಾತ್ರಕ್ಕೇ ಎಲ್ಲವೂ ನೇರವೇರಿದಂತಾಯಿತೇ ? ಅವರೇನು ಮಾಡಬಲ್ಲರು ? ಕೆಲವು ವೇಳೆ ಹಾಗೆ ಕುಡಿಯುವವರು ಅವರ ದೃಷ್ಟಿಗೆ ಬಿದ್ದರೆ ಅವರನ್ನು ದಸ್ತಗಿರಿ ಮಾಡಬಲ್ಲರು, ಕೋರ್ಟಿಗೆ ತೆಗೆದುಕೊಂಡು ಹೋಗಿ, ಜುರ್ಮಾನೆ ಬಗ್ಗೆರೆ ಹಾಕಿಸಬಲ್ಲರು. ಅಷ್ಟುಏನಾ ಅವರಿಂದ ಮಾತ್ರವೇನೂ ಸಾಧ್ಯವಾಗಲಾರದು. ಹೀಗಾಗಿ ಇಲ್ಲಿಗೆ 3 ವರ್ಷಗಳ ಕೆಳಗೆ ತಾವು ಎಲ್ಲದ್ದಿರೋ, ಇಂದೂ ಅದೇ ಮಟ್ಟದಲ್ಲಿದ್ದೀರಿ. ಕೈ ಬಿಡೋಣವೆಂದರೆ ಇದನ್ನು ಅರ್ಧಂಬರ್ಧಕ್ಕೆ ತಂದಿದ್ದೀರಿ. ಅಥವಾ ಇದನ್ನು ಸಂಪೂರ್ಣವಾಗಿಯಾದರೂ ತಂದ್ದೀರಾ ? ಅದೂ ಇಲ್ಲ. ಹೀಗಾಗಿ ನೀವು ಹಿಂದೂ ಇಲ್ಲ ಅಥವಾ ಮುಂದಕ್ಕೂ ಹೋಗುವ ಹಾಗಿಲ್ಲ. ಹೀಗೆ ಮಧ್ಯದಲ್ಲಿ ಸಿಕ್ಕುಹಾಕಿಕೊಂಡಿದ್ದೀರಿ.

ಜನಾಬ್ ಜೆ. ಮಹಮದ್ ಇಮಾಂರವರು.—ಹೌದು, ಅವರೀಗ ತ್ರಿಶಂಕು ಸ್ವರ್ಗದಲ್ಲಿದ್ದಾರೆ !

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹೌದು, ತಾವು ಇಲ್ಲಿಗೆ ಮೂರುವರ್ಷಗಳಾದಾಗ್ಯೂ, ಈ ಬಾಬಿನಲ್ಲಿ ಜಯಶಾಲಿಗಳಾಗಿಲ್ಲ. ಕೆಲವು ಜಿಲ್ಲೆಗಳಲ್ಲಿ ಜಾರಿಯಲ್ಲಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಜಾರೀಲೇ ಬಂದಿಲ್ಲ. ಇದನ್ನು ರಿವೈಸ್ ಮಾಡಲು ತಮಗೆ ಧೈರ್ಯವಿಲ್ಲ.

* Speach not revised by the Member Concerned.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು).—ಇದಕ್ಕೆಲ್ಲ ಧೈರ್ಯದ ಪ್ರಶ್ನೆಯ ಏತಕ್ಕೆ ಬೇಕು ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಒಂದು ಕಡೆ ಹಣದ ನಂಪಾದನೆ ಹೋಗುತ್ತದೆಂಬ ಭಯ, ಮತ್ತೊಂದು ಕಡೆ ಜಾರಿಗೆ ಸಂಪೂರ್ಣವಾಗಿ ತರಲಿಲ್ಲ ವೆಂಬ ಹೆದರಿಕೆ. ಈ ಎರಡರ ಮಧ್ಯೆ ಸಿಕ್ಕಿಕೊಂಡು ತಾವು ಹೀಗೆರ್ಲಾ ಮಾಡುತ್ತಿದ್ದೀರಿ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಧೈರ್ಯಕ್ಕೂ ಹೆದರಿಕೆಗೂ ತಾವು ಗಲಿಬಿಲಿ ಮಾಡಿಕೊಂಡಿರುವ ಹಾಗೆ ತೋರುತ್ತೆ. ಹಾಗೆಲ್ಲ confuse ಮಾಡಿಕೊಳ್ಳಬೇಡಿ.

ಶ್ರೀ ಎಚ್. ಬಿ ಗುಂಡಪ್ಪಗೌಡರು.—ಬೊಂಬಾಯಿನಲ್ಲಿ ನೋಡಿ ಅವರು ಎಷ್ಟು ಧೈರ್ಯವಾಗಿ ತಮ್ಮ ನೀತಿಯನ್ನು ಜಾರಿಗೆ ತಂದರು. ನಿಮ್ಮಲ್ಲಿ ಅಂಥ ನೀತಿ ಇಲ್ಲ. ನಿಮ್ಮಲ್ಲಿರತಕ್ಕ ನೀತಿಗಳೆಲ್ಲವೂ ನಿರ್ದೇವಾದವು.

Sri L. SIDDAPPA.—There should be quantitative expansion.

The Hon'ble Sri T. MARIAPPA.—We are not satisfied with quantitative expansion, but there must be qualitative expansion and consolidation.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ತಮ್ಮ ಖರ್ಚಾನೆ ಖಾಲಿಯಾಗುವ ಹಾಗಿದ್ದರೆ ಅದನ್ನು ಬೇರೆ ದಾರಿಯಿಂದ ಧರ್ತಿಮಾಡಿಕೊಳ್ಳಲು ಪ್ರಯತ್ನಮಾಡಿ.

ಶ್ರೀ ಜಿ. ಎ. ಆಚಾರ್ಯರವರು (ಬೆಂಗಳೂರು ಜಿಲ್ಲೆ).—ತಾವಾದರೂ ಅದಕ್ಕೊಂದು ಸರಿಯಾದ ಮಾರ್ಗ ಹೇಳಿ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆ ಬಗ್ಗೆ ತಾವೂ, ಸರ್ಕಾರದವರೂ ಇದ್ದೀರಲ್ಲ! ನಮಗೆ ತಿಳಿದಿದ್ದನ್ನು ನಾವು ತಿಳಿಸುತ್ತೇವೆ. ಎಲ್ಲೆಲ್ಲಿ ಇದು ಇನ್ನೂ ಪ್ರಾಬಲ್ಯದಲ್ಲಿರುತ್ತದೋ ಅಂಥಾ ಕಡೆ ನೀವು ಪರಿಣಾಮಕಾರಿಯಾಗುವಂಥ ಪ್ರಚಾರ ಕಾರ್ಯಗಳನ್ನೇ ಮಾಡಿ. ನೀವು ಈಗಾಗಲೇ ಡಿಸ್ಟ್ರಿಕ್ಟ್ ಅಡ್ವೈಜರಿ ಸಮಿತಿಗಳನ್ನು ನೇಮಕ ಮಾಡಿದ್ದೀರಿ. ಅವರಿಗೆ...

ಶ್ರೀ ಎಸ್. ರಂಗರಾಮಯ್ಯನವರು.—ನೀವು ಒಂದು ವಿಷಯಿಂಗ್‌ಗಾದರೂ ಬಂದಂತೆ ಕಾಣುಲಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಎರ್ಲಾ ಕಾಂಗ್ರೆಸ್ಸಿನವರೇ ಪ್ರತಿಯೊಂದರಲ್ಲೂ ಸೇರಿಕೊಂಡಿದ್ದೀರಿ. ನಮಗೆ ಯಾವುದರಲ್ಲಿಯೂ ಅವಕಾಶವೇ ಇಲ್ಲ. ಅಕ್ಕೈಕೆ, ನಿಮ್ಮ ಜಿಲ್ಲೆಯಲ್ಲಿ ಈ ಪಾನನಿರೋಧವನ್ನೇ ಇನ್ನೂ ಜಾರಿಗೆ ತಂದಿಲ್ಲ. ಅಂದ ಮೇಲೆ ನಿಮ್ಮ ವಿಚಾರವೂ ಅಷ್ಟೇ ಇರುತ್ತೆ. ನಾನು ಒಟ್ಟನಲ್ಲಿ ಹೇಳುವುದಿಷ್ಟೆ—ತಾವೀಗ ಈ ಎಕ್ಸೈಜ್ ಶಿಬ್ಬಂದಿಯಿಂದ ಇದನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದು, ಆ ಬಗ್ಗೆ ಪೋಲೀಸ್ ಶಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದೀರಿ. ನೀವು ಹೀಗೆ ಯಾವ ಕೆಲಸವನ್ನೇ ಮಾಡಿ, ಅದನ್ನು ಮಾಡುವ ಮುನ್ನ ಚೆನ್ನಾಗಿ ಆಲೋಚನೆ ಮಾಡಿ, ಮಾಡಿ. ಮೈನೂರಿಗೆ ಗೌರವ ಬರುವಂಥ ಕೆಲಸ ಮಾಡಿ. ಈಗ ನಾವು ನಮ್ಮ ಗೌರವ ಕಳೆದು ಕೊಳುವ ಪರಿಸ್ಥಿತಿ ಬಂದಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಾವು ಅದರ ಬಗ್ಗೆ ಇನ್ನೂ consolidate ಮಾಡುತ್ತಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ದುಡ್ಡಿದ್ದಾಗ ತಾವೂ ಮಾಡಿದಿರಿ. ಹಣವಿಲ್ಲದಾಗ ತಾವು ಈ ಆಲೋಚನೆಗಳನ್ನೆರ್ಲಾ ಈಗ ಮಾಡುತ್ತಿದ್ದೀರಿ. ಆದರೆ ಈ ಯೋಚನೆಗಳೆರ್ಲಾ ನಿಮಗೆ 1947ರಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಯಾವಾಗ ಇದ್ದ ಹಣವೆಲ್ಲ ಖರ್ಚಾಗಿ ಹೋಯಿತೋ, ಆಗ ಈ quality, quantity ಇತ್ಯಾದಿ ಪದಗಳನ್ನು ಹೇಳಲಿಕ್ಕೆ ಆರಂಭಿಸಿದ್ದೀರಿ. ತಾವು ಏನೇ ಮಾಡಿ. ಇದರ ಪರವಾಗಿ ಖಾನಗೀ ಜನರ ಶಿಬ್ಬಂದಿ ಮತ್ತು ಬೆಂಬಲ ನಮಗೆ ಇಲ್ಲದಿದ್ದರೆ ಇದು ಖಂಡಿತ ಕೈಗೂಡುವುದಿಲ್ಲ. ತಾವೇನೋ ಈಗ ಇದಕ್ಕಾಗಿ ಇಷ್ಟು ಹಣಬೇಕೆಂದು ಕೇಳಿದ್ದೀರಿ. ಅದರ ಬಗ್ಗೆ ನನ್ನ ಅಡ್ಡಿಯೇನೂ ಇಲ್ಲ. ಇದ್ದರೂ ಕೂಡ ಅದನ್ನು ಕೇಳತಕ್ಕವರೂ ಇಲ್ಲ. ನನ್ನೊಬ್ಬನ ಅಡ್ಡಿಯಿಂದೇನಾಗುತ್ತೆ ?

ಶ್ರೀ ಎ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ).—ಈ ಬಾಬಿಗೆ ಈಗಾಗಲೆ ಎಷ್ಟು ಒದಗಿಸಲಾಗಿದ್ದಿತೋ ಅಂದರೆ ಸುಮಾರು 7 ಲಕ್ಷ 25 ಸಾವಿರ ರೂಪಾಯಿಗಳ ಮೇಲೆ ಈಗ ಮತ್ತೆ ಇನ್ನೂ ಹೆಚ್ಚಿನ ಹಣ ಬೇಕಾಗಿದೆಯೆಂದು ಈಗ ಕೇಳಿದ್ದಾರೆ. ಇದಕ್ಕೆ ಕಾರಣವೇನೆಂಬುದೇ ತಿಳಿಯಲಿಲ್ಲ. ಈ ಪ್ರೊಹಿಬಿಷನ್ ಶಾಖೆಗೆ ಈಗಾಗಲೆ 4 ಲಕ್ಷ 28 ಸಾವಿರ ರೂಪಾಯಿ ಹೆಚ್ಚಾಗಿ ಖರ್ಚಾಗಿದೆಯೆಂದು ಕೇಳುತ್ತಿರುವಾಗ ಮತ್ತೊಂದು ಕಡೆ ಈ ಬಾಬಿನಲ್ಲಿ 3 ಲಕ್ಷ ಉಳಿತಾಯವಾಗಿದೆಯೆಂದು ಹೇಳಿದ್ದಾರೆ. ಆದರೆ ನಿಜವಾಗಿಯೂ ಹಾಗೆ ಉಳಿತಾಯವಾಗಿಲ್ಲ. ಇದರಲ್ಲಿ ಖರ್ಚೇಹೆಚ್ಚಾಗಿದೆ. ಆದ್ದರಿಂದ ಇವರ ಅಭಿಪ್ರಾಯವೇ ಸರಿಯಾಗಿ ಅರ್ಥವಾಗುತ್ತಿಲ್ಲ. ಜನಾಬ್ ಜೆ. ಮಹಮದ್ ಇಮಾಂರವರ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತ ಈ ಪೋಲೀಸ್ ಶಿಬ್ಬಂದಿಯನ್ನು ನೇಮಕ ಮಾಡಿಕೊಂಡಾಗ್ಯೂ ಮತ್ತೊಂದು ಬಾಬಿನಲ್ಲಿ 6, 17, 793 ರೂಪಾಯಿಗಳು ಉಳಿತಾಯವಾಗಿರುತ್ತದೆಂದು ಉತ್ತರ ಕೊಟ್ಟಿದ್ದಾರೆ. ಇಷ್ಟು ಉಳಿತಾಯವಾಗಿದ್ದು ಈಗ ಹೆಚ್ಚಾಗಿ 7,55,500 ರೂಪಾಯಿಗಳನ್ನು ಕೇಳಿದೆ. ಇದರ ಪ್ರಕಾರ 14 ಲಕ್ಷ ಹೆಚ್ಚು ಖರ್ಚಾದ ಹಾಗೆ ಆಯಿತು. ಅಂದರೆ ಹಿಂದೆ ಆಗಿರುವ ಬಡ್ಜೆಟ್ಟಿಗಿಂತ 14 ಲಕ್ಷ ಹೆಚ್ಚು ಎಂಬ ಅರ್ಥ ಬರುತ್ತದೆ. ಇದು ಸರಿಯೆ ಅಥವಾ ಉಳಿತಾಯವಾಗಿರುವುದು ಸರಿಯೆ ಎಂಬುದನ್ನು ವಿವರಿಸಬೇಕು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವಿಚಾರದಲ್ಲಿ ಜನಾಬ್ ಇಮಾಂರವರ ಪ್ರಶ್ನೆಗೆ ಆಗಲೇ ಉತ್ತರ ಹೇಳಿದೆ. ಆದರೆ ಕಡಿಮೆ ಮಾಡುವ ಯೋಜನೆಗೂ ಇದಕ್ಕೂ ಸಂಬಂಧವಿಲ್ಲ. ಸಿಬ್ಬಂದಿಗಾಗಿ ಆರು ಲಕ್ಷ ಚಿಲ್ಲರೆ ಖರ್ಚಾಗಿರುವುದು 1949ರಲ್ಲಿ. ಬಡ್ಜೆಟ್ಟಿನ 52ನೆಯ ಪುಟದಲ್ಲಿ ನೋಡಿದರೆ 1948—49ರಲ್ಲಿ ಒಂದು ಕೋಟಿ 11ಲಕ್ಷ ಖರ್ಚಾಗುತ್ತಿತ್ತು. ಪೋಲೀಸ್ ಇಲಾಖೆಗೆ ಆಮೇಲೆ 1949—50ರಲ್ಲಿ ಅಂದಾಜು ತಿದ್ದುಪಡಿಯಾಗಿರುವ ಪ್ರಕಾರ ಒಂದು ಕೋಟಿ 5 ಲಕ್ಷ ಆಗಿದೆ. ಆ ಮೇಲೆ 1950—51ನೆಯ ಸಾಲಿಗೆ ಒಪ್ಪಿಸಿರುವ 85ಲಕ್ಷ ಚಿಲ್ಲರೆಯಲ್ಲಿ ಪಾನನಿರೋಧಕ್ಕಾಗಿ ಏರ್ಪಡಿಸಿರುವ ಸಿಬ್ಬಂದಿಗೆ ಅವಕಾಶ ಮಾಡಿರಲ್ಲ. ಏಕೆಂದರೆ ಸರ್ಕಾರಿ ಆಜ್ಞೆಯು 1950ನೆಯ ಇಸವಿ ಮಾರ್ಚ್ 31ರಲ್ಲಿ ಆಯಿತು. ಆದರೆ 85,83,700 ರೂಪಾಯಿಗಳ ಅಂದಾಜು ಮಾಡಿದಾಗ ಮೈನೆನ್ಸ್ ಗುರುತು ಹಾಕಿದ್ದೇವೆ. ಏಕೆಂದರೆ ಇಂಡಿಯಾ ಸರ್ಕಾರದಿಂದ ಅದು ಬರತ್ತದೆಯೆಂಬ ನಿರೀಕ್ಷೆಯಿದೆ. Deduct charges under 6- Railway Police ಎಂದು ತೋರಿಸಿದೆ. 1950ನೆಯ ಏಪ್ರಿಲ್ ಒಂದರಲ್ಲಿ ವೀನೀಕರಣವಾದಾಗ್ಯೂ ಇಲ್ಲಿಯವರೆಗೆ ಸಿಬ್ಬಂದಿಗೆ ಸಂಬಳ ಕೊಡಬೇಕಾಗಿದೆ. ಅದರಲ್ಲಿ ಬಹುಭಾಗ ಅಂದರೆ ಪ್ರಾಯಶ

ಕೇಕಡ 60 ಭಾಗ ಖಂಡಿತ ಬರುತ್ತದೆ. We are trying for the whole amount. ಆದರೆ ರೈಲ್ವೆ ಸಿಬ್ಬಂದಿಯೇ ಆದರೂ ಕೂಡ ಅವರಿಗೆ ಎರಡು ಕೆಲಸ ಇದೆ. ರೋಕಲ್ ಆಗಿ ನೋಡಿಕೊಳ್ಳಬೇಕಾದ್ದು ಮತ್ತು ರೈಲ್ವೆ ಕೆಲಸ—ಎರಡನ್ನೂ ಅವರು ಮಾಡಬೇಕು. ಅವಕ್ಕೆ ಬಾಕಿ ವ್ಯಾಂತಗಳಲ್ಲಿ ಅಂದರೆ ಮದ್ರಾಸು, ಬೊಂಬಾಯಿಗಳಲ್ಲಿರುವಂತೆ ನೋಡಿಕೊಡುತ್ತೇವೆಂದು ಹೇಳಿದ್ದಾರೆ. ನಾವು ಹಾಗೆ ಮಾಡುವುದು ಸರಿಯಲ್ಲ. ಸಂಸ್ಥಾನಕ್ಕಾಗಿರುವ ಖರ್ಚನ್ನು ಪೂರ್ತಿಯಾಗಿ ಕೊಡಬೇಕೆಂದು ಕೇಳುತ್ತಿದ್ದೇವೆ. ಆದ್ದರಿಂದಲೇ ಬಡ್ಜೆಟ್ ತಯಾರು ಮಾಡುವಾಗ ಎರಡು ಲಕ್ಷ ಚಿಲ್ಲರೆ ಬರುತ್ತದೆಯೆಂಬ ನಿರೀಕ್ಷೆಯ ಮೇರೆ ಕಡಿಮೆ ಮಾಡಬೇಕೆಂದು ಹೇಳಿದೆ. ಅದನ್ನು ಯೋಚನೆಮಾಡಿ ಹಾಕಬೇಕಾಗಿತ್ತು ಎಂದು ಜನಾಬ್ ಇಮಾಂರವರು ಹೇಳಿದರು. ಆದರೆ ಅದನ್ನು ಈ ರೀತಿಯಾಗಿ ತೋರಿಸಿರುವ ಉದ್ದೇಶ, ಇಂಡಿಯಾ ಸರ್ಕಾರಕ್ಕೆ ತೋರಿಸಿ ಅಲ್ಲಿಂದ ಬರಮಾಡಿಕೊಳ್ಳುವುದಕ್ಕಾಗಿ. ಒಂದುವೇಳೆ ಹಾಗೆ ಮಾಡದೇ ಇದ್ದರೆ ಇಂಡಿಯಾ ಸರ್ಕಾರದವರು ಹಣ ಹೇಗಿದ್ದರೂ ಒದಗಿಸಿದೆಯೆಂದು ಹೇಳಬಹುದು. ಆದ್ದರಿಂದಲೇ ಬಹಳ ಎಚ್ಚರಿಕೆಯಿಂದ ಎರಡು ಲಕ್ಷ ಚಿಲ್ಲರೆ ಬರಬೇಕೆಂದು ಡಿಡಕ್ಟ್ ಎಂದು ಹೇಳಿದ್ದೇವೆ.

Janab J. MOHAMED IMAM.—Is the Hon'ble Minister replying to the debate on the cut motion?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—I am only intervening in the debate. ಹಾಗೆ ತೋರಿಸದಿದ್ದರೆ 2ಲಕ್ಷ ಚಿಲ್ಲರೆ ನಮಗೆ ಬರುತ್ತಿರಲಿಲ್ಲ. ಸಿಬ್ಬಂದಿ ಖರ್ಚನ್ನು ಒಂದು ಕೋಟಿಯಿಂದ 85 ಲಕ್ಷ 83 ಸಾವಿರ ಚಿಲ್ಲರೆಗೆ ಇಳಿಸಿದ್ದೇವೆ. It would be dangerous to further cut the establishment. ಇನ್ನು ಹೆಚ್ಚಿಗೆ ಕಡಿಮೆ ಮಾಡಲು ಸಾಧ್ಯವಾಗದೇ ಹೋದುದರಿಂದ ಕಟ್ಟಡಗಳಿಗಾಗಿ ಒಂದು ಲಕ್ಷ, ಸಿಬ್ಬಂದಿಗಾಗಿ ಒಂದು ಲಕ್ಷ ಹೀಗೆ 2ಲಕ್ಷಕ್ಕೆ ಒಪ್ಪಿಗೆ ಕೇಳಿದೆ. ಅದು ಪೂರ್ತಿಯಾಗಿ ಕೇಂದ್ರದಿಂದ ಬರಬಹುದೆಂದು ನಂಬರಾಗಿದೆ. ಕಟ್ಟಡಗಳ ಪೈಕಿ ಅರ್ಧ ಆಗಿರುವುದನ್ನು ಮಾತ್ರ ಪೂರೈಸಿ ಹೊಸ ಕಟ್ಟಡಗಳನ್ನು ಕಟ್ಟಲು ಅವಕಾಶ ಕೊಡದಂತೆ ಏರ್ಪಾಟು ಮಾಡಿದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಜನಾಬ್ ಇಮಾಂರವರು ತಂದಿರುವ ಕತ್ತರಿ ಪ್ರಯೋಗವನ್ನು ವಿರೋಧಿಸುತ್ತೇನೆ. ಅವರು ಈ ಸಂದರ್ಭದಲ್ಲಿ ಹೇಳಿರುವುದು ಎರಡು ಮುಖ್ಯ ವಿಚಾರ. ಸಿಬ್ಬಂದಿಯನ್ನು ಹೆಚ್ಚುಮಾಡಿರುವುದಕ್ಕೆ ವಿವರಣೆ ಬೇಕೆಂದೂ ಮತ್ತು ಸಿಬ್ಬಂದಿಯನ್ನು ಹೆಚ್ಚಿಸಿರುವುದರಿಂದ ಆಗಿರವ ಪರಿಣಾಮವನ್ನು ಚರ್ಚೆಮಾಡಬೇಕೆಂದೂ ಈ ಸೂಚನೆಯನ್ನು ತಂದಿದ್ದಾರೆ. ಮೊದಲನೆಯದಾಗಿ, ಸಿಬ್ಬಂದಿಯೆಷ್ಟು ಎಂಬುದನ್ನು ಮಾನ್ಯ ಮಂತ್ರಿಗಳು ಆಗಲೇ ನನ್ನ ಪ್ರಶ್ನೆಗೆ ಜವಾಬಾಗಿ ತಿಳಿಸಿದ್ದಾರೆ. ಈ ಕತ್ತರಿ ಪ್ರಯೋಗದಲ್ಲಿ ಅವರಿಗೆ ಸಂಬಂಧಪಟ್ಟವರುವುದು 4 ಲಕ್ಷ 28 ಸಾವಿರ ರೂಪಾಯಿಗಳು ಮಾತ್ರ. ಎಕ್ಸೈಜ್ ಬಾಬಿನ ಸಿಬ್ಬಂದಿ ಸಾಲದೆ ಅದರ ಕೆಲಸವನ್ನು ಪೋಲಿಸಿನವರಿಗೆ ವಹಿಸಬೇಕಾಗಿ ಬಂದುದರಿಂದ ಆ ಸಿಬ್ಬಂದಿಗಾಗಿ ಹೆಚ್ಚು ಖರ್ಚು ಮಾಡಬೇಕಾಗಿ ಬಂತೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದು ಬಹಳ ಮುಖ್ಯವಾದ ವಿಚಾರ. ನಮ್ಮ ಸಂಸ್ಥಾನದಲ್ಲಿ ಪಾನನಿರೋಧವನ್ನು ಜಾರಿಗೆ ತರಲು ಕಾರಣವೇನೆಂದರೆ ಯಾವಾಗ ಮದ್ರಾಸಿನಲ್ಲಿ ಅದನ್ನು ಆಚರಣೆಗೆ ತಂದರೋ ಆಗ ಅದರ ಅಕ್ಕಪಕ್ಕದಲ್ಲಿರುವ ಸಂಸ್ಥಾನಗಳಲ್ಲೂ ಆದೇರೀತಿ ಮಾಡಬೇಕಾಯಿತು. ಮದ್ರಾಸು ಪ್ರಾಂತದವರು ಇಲ್ಲಿಗೆ ಬಂದು ಕುಡಿಯುವುದಕ್ಕೆ ಪ್ರಾರಂಭಮಾಡಿದರು. ಇದರಿಂದ ಸಂಸ್ಥಾನಕ್ಕೆ ಅನೇಕ ವಿಧವಾದ ತೊಂದರೆಯಾಗಲು ಪ್ರಾರಂಭವಾಯಿತು. ಅದಕ್ಕಾಗಿ ಹೆಚ್ಚಿಗೆ ಸಿಬ್ಬಂದಿ ನೇಮಕ ಮಾಡಿದ್ದರಿಂದ ಬಹಳ ಮಟ್ಟಿಗೆ ತಕ್ಷೀರುಗಳನ್ನು ಪತ್ತೆಹಚ್ಚಲು ಅವಕಾಶವಾಗಿದೆ. ಆ ಬಗ್ಗೆ ವಿವರಣೆ ಕೊಡಬಹುದಾಗಿತ್ತು. ನನಗೆ ತಿಳಿದಿರುವಂತೆ ಸುಮಾರು 5,000 ಕೇಸುಗಳನ್ನು ಈಚೆಗೆ ಪತ್ತೆಮಾಡಿದ್ದಾರೆಂದು ಗೊತ್ತಾಗಿದೆ. ಆದ್ದರಿಂದ ಹೆಚ್ಚುಸಿಬ್ಬಂದಿಯಿಂದ ಬಹಳ ಮಟ್ಟಿಗೆ ಅನುಕೂಲವಾಗಿದೆ. ಆದರೆ ಬೀ ಕಾನೂನು ಪ್ರಕಾರವಾಗಿ ಬರೋದ್ಧಂಧದಿಂದ ಕೋರ್ಟಿನಲ್ಲಿ ಶಿಕ್ಷೆ ಮಾಡುವುದರಿಂದ, ಪಾನನಿರೋಧವನ್ನು ಯಶಸ್ವಿಯಾಗಿ ಮಾಡುವುದಕ್ಕಾಗುವುದಿಲ್ಲವೆಂದು ಶ್ರೀ ಗುಂಡಪ್ಪ ಗೌದರು ಹೇಳಿದರು. ಅದನ್ನು ಒಪ್ಪೋಣ. ಅದಕ್ಕೆ ಏನು ಮಾಡಿದ್ದೀರಿ ಎಂದು ಕೇಳಿದರು. ಹಾಗೆ ಕೇಳುವುದು ಸರಿಯಿಲ್ಲ. ಪ್ರತಿಯೊಂದು ಪ್ರದರ್ಶನಗಳಲ್ಲೂ ಮತ್ತು ಅನೇಕಕಡೆ ಚಿತ್ರಪ್ರದರ್ಶನಗಳ ಮೂಲಕವೂ ಅದರ ಪರಿಣಾಮವನ್ನು ಜನರಿಗೆ ಪ್ರದರ್ಶಿಸಲಾಗಿದೆ. ಅವನ್ನು ನೋಡಿದರೆ ಭಯವಾಗುತ್ತದೆ. ಆ ಮೂಲಕ ನೋಡಿದವರು ಕುಡಿತವನ್ನು ನಿಲ್ಲಿಸಲು ಅವಕಾಶವಾಗಿದೆ. ಕಾಂಗ್ರೆಸ್ ಸ್ವರಾಜ್ಯ ತಂದು ಕೊಟ್ಟಿದೆ. ಸ್ವಾತಂತ್ರ್ಯವನ್ನು ಗಳಿಸಿದೆ. ಕಾಂಗ್ರೆಸ್ ಸರ್ಕಾರ ಬಂದನಂತರ ಮದ್ಯಪಾನನಿರೋಧ ಮಾಡಿ ಜನರು ಮನೆಯಲ್ಲಿ ಸುಖಶಾಂತಿಗಳಿಂದ ಬಾಳುವಹಾಗೆ ಮಾಡುತ್ತಿದೆ. ಇದೇ ಪಲ್ಲವಿಯನ್ನು, ಇದೇ ರಾಗವನ್ನು ಎಷ್ಟೋಸಲ ಹೇಳುತ್ತಿದ್ದರೂ ಕೂಡ ಈ ಸರ್ಕಾರ ಏನೂ ಮಾಡಿಲ್ಲ ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಅವರು ಭಾಷಣಗಳಿಗೆ ಬರುವುದಿಲ್ಲ. ಎಲ್ಲಾ ಕಡೆಯೂ ಇರುವ ತೊಂದರೆಗಳು ಎಷ್ಟೋ ಕಡಮೆಯಾಗುತ್ತಿವೆ. ಆದ್ದರಿಂದ ಏನೂಮಾಡಿಲ್ಲ ಎಂದು ಹೇಳಬಾರದು.

ಶ್ರೀ ಬಿ. ಹುಚ್ಚೇಗೌದರು.—ಕುಡಿತ ಈಗ ಕಡಿಮೆಯಾಗಿದೆಯೆ?

ಶ್ರೀ ಎಸ್. ರಂಗರಾಮಯ್ಯನವರು.—ಅಗತ್ಯವಾಗಿ ಕಡಿಮೆಯಾಗಿದೆ. ಆದರೆ ಕಾಂಗ್ರೆಸ್ಸಿನವರು ಕುಡಿಯಿರಿ ಎಂದು ಎಲ್ಲೂ ಹೇಳುತ್ತಿಲ್ಲ. ಪ್ರಚಾರಕ್ಕೆ ವಿರೋಧವಾಗಿ ಕುಡಿಯುವವರು ಇದ್ದೇಇರುತ್ತಾರೆ. ಅವರಿಗೆ ನಿರ್ಬಂಧವಿರುವ ಕಡೆ ಶಿಕ್ಷೆಯೂ ಆಗುತ್ತಿದೆ. ಹೊರಗಿನಿಂದ ಎಷ್ಟೋಮಂದಿ ಬಂದು ಕುಡಿಯುವುದನ್ನು ತಪ್ಪಿಸುವುದಕ್ಕಾಗಿಯೇ ಸಿಬ್ಬಂದಿಯನ್ನು ಹೆಚ್ಚಿಸಿದೆ. ಆದರೆ ಸಂಪೂರ್ಣವಾದ ಫಲ ಇನ್ನೂ ದೊರೆತಿಲ್ಲ. ಜನರು ಸರ್ಕಾರದೊಂದಿಗೆ ಸಹಕರಿಸಿದರೆ ಸರ್ಕಾರದವರು ತಮ್ಮ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಬಹುದು. ಇಷ್ಟು ಹೇಳಿ ಈ ಖೋತಾ ಸೂಚನೆಯನ್ನು ವಿರೋಧಿಸುತ್ತೇನೆ.

* ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜ್ ಸಚಿವರು).—ಅಧ್ಯಕ್ಷರೆ, ಈ ಖೋತಾ ಸೂಚನೆ ಪೋಲೀಸ್ ಇಲಾಖೆಗೆ ಸಂಬಂಧಪಟ್ಟದ್ದು. ಇದರೊಡನೆ ಅಬ್ಕಾರಿ ಇಲಾಖೆಗೆ ನಿಕಟ ಸಂಪರ್ಕವನ್ನು

* Speech not revised by the Members.

(ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.)

ಕಲ್ಪಿಸಿಕೊಂಡು ಕೆಲವು ಮಾನ್ಯ ಸದಸ್ಯರು ಕೆಲವು ಟೀಕೆಗಳನ್ನು ಮಾಡಿದ್ದಾರೆ. ಪಾನನಿರೋಧ, ಎಂದರೆ, ಮದ್ಯಪಾನವನ್ನು ನಿಲ್ಲಿಸಿದುದು. ತಪ್ಪೆಂದು ಯಾರೂ ಅಭಿಪ್ರಾಯ ಪಡುವುದಿಲ್ಲ. ಅಂತೂ ಬಹಳ ಮಂದಿ ಈ ಕಾರ್ಯಕ್ರಮವನ್ನು ನಿಲ್ಲಿಸಬೇಕೆಂದು. ಅಭಿಪ್ರಾಯ ಪಡುವುದಿಲ್ಲವೆಂದು ನನಗೆ ತೋರುತ್ತದೆ. ಇದನ್ನು ಬೇಗ ಮುಂದುವರಿಸಿಲ್ಲವೆಂದು ಕೆಲವರ ಆಕ್ಷೇಪಣೆ. ಇದರ ಸಾಧಕಬಾಧಕಗಳನ್ನು ಯೋಚನೆಮಾಡಿ ಎಷ್ಟು ಬೇಗ ಈ ಕಾರ್ಯವನ್ನು ಮಾಡಿದರೆ ನಮ್ಮ ಸಮಾಜಕ್ಕೆ ಸಾರ್ಥಕವಾಗುತ್ತದೆ ಎಂಬುದನ್ನು ಚೆನ್ನಾಗಿ ವಿಮರ್ಶೆಮಾಡಿ, ಆಚರಣೆಗೆ ತರುವುದು ಬುದ್ಧಿವಂತಿಕೆಯ ಲಕ್ಷಣ ಎಂದು ನನಗೆ ಎನಿಸುತ್ತದೆ.

ಈ ಸಂದರ್ಭದಲ್ಲಿ ಪಾನನಿರೋಧದಿಂದ ಆಗತಕ್ಕ ಪ್ರಯೋಜನ ಮುಂತಾದ ವಿಚಾರಗಳನ್ನು ಕುರಿತು ದೀರ್ಘವಾದ ಭಾಷಣ ಮಾಡುವುದು ಅನಾವಶ್ಯಕ.

*ಶ್ರೀ ಬಿ. ಹುಚ್ಚೇಗೌಡರು.—ಪಾನನಿರೋಧದ ಮೇಲೆ ಹೇಳುತಿದ್ದಾರೆ. ನಾನು ಕೇಳಿದ್ದು ಉಳಿತಾಯ ವೆಷ್ಟೆಂದು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪ್ರಾರಂಭದಲ್ಲಿ ನಭಾನಾಯಕರು ಇದು ಪೋಲೀಸು ಇಲಾಖೆಗೆ ಸಂಬಂಧಪಟ್ಟದ್ದೆಂದು ಹೇಳಿದರೂ ಕೂಡ ವಿರೋಧ ಪಕ್ಷದ ನಾಯಕರು ಪಾನನಿರೋಧಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಕುರಿತು ಹೇಳಿದರು : ಅದರಿಂದ ನಾನು ಈ ವಿಷಯವನ್ನು ಹೇಳಬೇಕಾಯಿತು.

ಎಲ್ಲೆಲ್ಲ ಪಾನನಿರೋಧ ಜಾರಿಯಲ್ಲಿದೆಯೋ ಅಲ್ಲೆಲ್ಲಾ ಶೇಕಡ 50ಕ್ಕಿಂತ ಹೆಚ್ಚು, ಅಂದರೆ ವಿಪರೀತವಾಗಿ ಕಳ್ಳಭಟ್ಟಿ ಇಳಿಸುತ್ತಿದ್ದಾರೆಂದು ಹೇಳಿದರು. ಶೇಕಡ 50 ರಷ್ಟು ನಡೆಯುತ್ತಿದೆಯೆಂದು ಒಪ್ಪುವುದಕ್ಕಾಗುವುದಿಲ್ಲ. ಅನೇಕ ಕಡೆ ಹುಚ್ಚಾಗಿ ಕಳ್ಳಭಟ್ಟಿ ನಡೆಯುತ್ತಿದೆಯೆಂದು ಅಸ್ಪಷ್ಟವಾಗಿ vague and general statement ಹೇಳುವುದಕ್ಕೆ ಬದಲು ಇಂತಿಂಥಾ ಊರಿನಲ್ಲಿ, ಇಂತಿಂಥಾಕಡೆ ಇಂತಿಂಥವರು ಮಾಡುತ್ತಿದ್ದರೆಂದು ಹೇಳಿದ್ದಿದ್ದರೆ ಒಪ್ಪಬಹುದಾಗಿತ್ತು. ಆ ರೀತಿ ವಿವರಗಳನ್ನು ಕೊಟ್ಟರೆ ನಾವು ಬದುಕುವುದೇ ಕಷ್ಟವೆಂದು ಒಬ್ಬರು ಮಾನ್ಯ ಸದಸ್ಯರು ಹೇಳಿದರು. ಈ ರೀತಿ ಹೇಳಿದರೆ ಸಾರ್ವಜನಿಕರ ಬೆಂಬಲ ನಮಗೆ ದೊರೆಯುವುದು ಎಷ್ಟು ಕಷ್ಟ ಎಂಬುದು ಗೊತ್ತಾಗುತ್ತದೆ. ಇದನ್ನು ಶ್ರೀ ಗುಂಟಪ್ಪಗೌಡರೂ ಕೂಡ ಯೋಚನೆ ಮಾಡಬೇಕು. ಕಳ್ಳಭಟ್ಟಿ ನಡೆಯದೆ ಇರುವಹಾಗೆ ಎಷ್ಟು ಮಟ್ಟಿಗೆ ಇರಾಖೆಯವರು ಕೆಲಸಮಾಡಿದ್ದಾರೆಂಬುದು ಅಂಕೆ ಅಂಶಗಳನ್ನು ಹೇಳಿದರೆ ಗೊತ್ತಾಗುತ್ತದೆ. 1948—49ನೆಯ ಸಾಲಿನಲ್ಲಿ ಈ ಪಾನನಿರೋಧದ ಏರ್ಪಾಡು ಪ್ರಾರಂಭವಾದಮೇಲೆ 1,668 ಕೇಸುಗಳು ನಡೆದಿವೆ. ಎರಡನೆಯ ವರ್ಷ 5 ಜಿಲ್ಲೆಗಳಲ್ಲಿ 9 ತಿಂಗಳಲ್ಲಿ 981 ಕೇಸುಗಳನ್ನು ಪೋಲೀಸಿನವರು ಕಂಡುಹಿಡಿದರು. ಈ ವರ್ಷ, ಎಂದರೆ, ಪ್ರಸಕ್ತ ಸಾಲಿನಲ್ಲಿ 8 ತಿಂಗಳಲ್ಲಿ, ಎಂದರೆ ನವೆಂಬರ್ ಕೊನೆಯೊಳಗಾಗಿ 5 ಜಿಲ್ಲೆಗಳಲ್ಲಿ 5,934 ಕೇಸುಗಳನ್ನು ಹಾಕಿದ್ದಾರೆ. ಹೀಗೆ ಕಳ್ಳಭಟ್ಟಿಯನ್ನು ಕಂಡುಹಿಡಿದು ಶಿಕ್ಷೆಮಾಡಿರುವುದಕ್ಕೆ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಬೇಕು. ಸರ್ಕಾರದವರು ಇಷ್ಟು ದಕ್ಷತೆಯಿಂದ ಕೆಲಸಮಾಡಿದ್ದಾರೆಂಬ ಬಗ್ಗೆ ಪ್ರೋತ್ಸಾಹ ಕೊಟ್ಟು ಇದನ್ನು ಕೃತಜ್ಞತೆಯಿಂದ ಒಪ್ಪಿಕೊಳ್ಳುವುದು ತಮ್ಮ ಕರ್ತವ್ಯವೆಂದು ಸ್ವಲ್ಪ ಉಚಾಯಿಸಿ ಅರಿಕೆ ಮಾಡಿಕೊಳ್ಳುತ್ತೇನೆ. ಪೋಲೀಸಿನವರು ಬಹಳ ಚುರುಕಾಗಿ ಕೆಲಸಮಾಡುತ್ತಿದ್ದಾರೆ. ಸ್ವಲ್ಪಕಾಲದಲ್ಲಿ 5,934 ಕೇಸುಗಳನ್ನು ಕೋರ್ಟಿನಲ್ಲಿ ಹಾಕಿದ್ದಾರೆಂದ ಮೇಲೆ ಇದಕ್ಕಿಂತಲೂ ಇನ್ನೇನು ಕೆಲಸ ಮಾಡಬೇಕೆಂದು ಕೇಳಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಅದರಲ್ಲಿ ಶಿಕ್ಷೆ ಆದದ್ದು ಎಷ್ಟು?

ಮಾನ್ಯ ಶ್ರೀ ಎಚ್ ಸಿದ್ದಯ್ಯನವರು.—ಅದನ್ನು ಹೇಳಲು ನೋಟೀಸ್ ಬೇಕು.

ನಾನು ಇಷ್ಟು ಹೇಳಿದ ಮಾತ್ರಕ್ಕೇ ಕಳ್ಳಭಟ್ಟಿ ನಿಂಪೂರ್ಣವಾಗಿ ನಿಂತಿದೆಯೆಂದು ಹೇಳಿದೆನೆಂದು ತಿಳಿಯಬಾರದು. ಆದರೆ ಇದನ್ನು ನಿಲ್ಲಿಸಲು ಆಡಳಿತ ನಡೆಸುತ್ತಿರುವ ಸರ್ಕಾರದವರು ಯಾವ ಯಾವ ಕೆಲಸಮಾಡಬೇಕೋ ಅದನ್ನೆಲ್ಲಾ ಮಾಡುತ್ತಿದ್ದಾರೆಂಬುದು ಇದರಿಂದ ಸ್ಪಷ್ಟವಾಗಿ ತಿಳಿಯಬಹುದೆಂದು ನನ್ನ ಮನಸ್ಸಿಗೆ ತೋರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಉಳಿತಾಯವೆಷ್ಟಾಯಿತು ಎಂಬ ನನ್ನ ಪ್ರಶ್ನೆಗೆ ಉತ್ತರವೇ ಬರಲಿಲ್ಲ.

*ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಎಕ್ಸೈಜು ಬಾಬಿನಲ್ಲಿ 3 ಲಕ್ಷ 35 ಸಾವಿರ ಉಳಿತಾಯ ತೋರಿಸಿದ್ದಾರೆ.

ಅಧ್ಯಕ್ಷರೆ, ನಾನು ಈ ಖೋತಾ ನಿರ್ಣಯವನ್ನು ಪುಷ್ಟೀಕರಿಸುತ್ತೇನೆ. ಇದರ ಪರವಾಗಿ ಈಗಾಗಲೇ ಮಾತನಾಡಿರುವ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಈಗಾಗಲೇ ಸ್ವಲ್ಪಮಟ್ಟಿಗೆ ತಿಳಿಸಿದ್ದಾರೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕೆಂಬ ಅಭಿಲಾಷೆಯಿದೆ. ಪಾನನಿರೋಧ ಜಾರಿಗೆ ಬಂದು ಸುಮಾರು ಎರಡು ವರ್ಷವಾಯಿತು. ಇದು ಜಾರಿಗೆ ಬಂದನಂತರ ಎಷ್ಟುಮಟ್ಟಿಗೆ ಪರಿಣಾಮಕಾರಿಯಾಗಿ ಜಾರಿಗೆ ಕೊಟ್ಟಿದ್ದಾರೆ ಎಂಬುದನ್ನು ಪರಿಶೀಲಿಸಿ ನೋಡಿದರೆ, ಪಾನನಿರೋಧವನ್ನು ಜಾರಿಗೆ ತರಲು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ಸಲಹೆಮಾಡಲು ಒಂದು ಸಮಿತಿಯು ನೇಮಕವಾಯಿತು. ಆ ಸಮಿತಿಯವರು ಶಿಫಾರಸು ಮಾಡಿದಮೇಲೆ ಜಾರಿಗೆ ಕೊಡಲು ಎಕ್ಸೈಜು ಇಲಾಖೆಯನ್ನು ತಪ್ಪಿಸಿ ಪೋಲೀಸು ಇಲಾಖೆಗೆ ವಹಿಸಿದ್ದಾರೆ. ಆದಕಾರಣ ಪೋಲೀಸು ಇಲಾಖೆಗೆ ಈ ಸಿಬ್ಬಂದಿ ಖರ್ಚಿಗಾಗಿ 4,28,500 ರೂಪಾಯಿ ಬೇಕಾಗಿರುವುದರಿಂದ ಇದಕ್ಕೆ ಈ ಸಭೆಯ ಅನುಮತಿ ಪಡೆಯಲು ಈ ಡಿಮ್ಯಾಂಡನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಪಾನನಿರೋಧವನ್ನು ಜಾರಿಗೆ ಕೊಟ್ಟಮೇಲೆ ಕುಡುಕರ ಸಂಖ್ಯೆ ಇನ್ನೂ ಜಾಸ್ತಿಯಾಗಿದೆಯೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಅಂಕಅಂಶಗಳನ್ನು ಕೊಡುತ್ತೀರಾ?

ಶ್ರೀ ಎಲ್. ಸಿದ್ದಪ್ಪನವರು.—ಅಂಕಿ ಅಂಶಗಳನ್ನು ನಾವೇನೂ ಕೊಡಬೇಕಾಗಿಲ್ಲ. ಶ್ರೀ ಕಡಿದಾಳ್ ಮಂಜಪ್ಪನವರಿಗೆ ಇದುವರೆಗೆ ಇದು ತಿಳಿಯದೇ ಇದ್ದರೆ ಹಳ್ಳಿಗಾಡಿನ ಪರಿಸ್ಥಿತಿ ಹಿಂದೆ ಹೇಗಿತ್ತು, ಶಿವಮೊಗ್ಗ ಜಿಲ್ಲೆಯಲ್ಲೇ, ಈಗ ಹೇಗಿದೆ ಎಂಬುದನ್ನು ತಿಳಿಯಲು ಅವರು ಹೋಗಿ ಎರಡು ತಿಂಗಳು ಕಾಲ ಯಾವುದಾದರೂ ಹಳ್ಳಿಯಲ್ಲಿ ವಾಸಮಾಡಿದರೆ ಗೊತ್ತಾಗುತ್ತದೆ. ಆ ಮೇಲೆ ಕುಡಿತ ಜಾಸ್ತಿಯಾಗಿದೆ, ಕಡಿಮೆಯಾಗಿಲ್ಲವೆಂಬುದು ಅವರಿಗೇ ಮನದಟ್ಟಾಗುತ್ತದೆ.

* Speech not revised by the Member concerned.

ಈಗ ಎಕ್ಸೈಜು ಇಲಾಖೆಯಿಂದ ತಪ್ಪಿಸಿ ಪೋಲೀಸು ಇಲಾಖೆಗೆ ವಹಿಸಿ ಸುಮಾರು 9 ತಿಂಗಳಾಯಿತು. ಆ ಮೇರಾದರೂ ಕಡಿಮೆಯಾಗಿದೆಯೆ ಎಂದರೆ, ಅದೂ ಇಲ್ಲ. ಇದು ಹಳ್ಳಿಗಳಲ್ಲಿ ಹೋಗಿ ವಾಸಮಾಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ಸಾಯಂಕಾಲ ಐದು ನಿಲ್ಲ ಹೋಗಿ ಕುಳಿತುಕೊಂಡು ಬೆಳಗ್ಗೆ ವಾಪಸುಬಂದರೆ ಇತರರಿಗೆ ಹೇಗೆ ಗೊತ್ತಾಗುತ್ತದೆ! ಹೇಗೆ ಜಾರಿ ಮಾಡಿದ್ದಾರೆಂಬ ಬಗ್ಗೆ ಹೇಳುವಾಗ ನುಮಾರು ಆರು ಸಾವಿರ ಕೇಸುಗಳನ್ನು ಹಾಕಿರುವುದಾಗಿ ಹೇಳಿದರು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—5,924 ಕೇಸುಗಳು.

ಶ್ರೀ ಎರ್. ಸಿದ್ದಪ್ಪನವರು.—ನುಮಾರು ಆರು ಸಾವಿರ ಕೇಸುಗಳನ್ನು ಈ ಏರ್ಪಾಡು ಜಾರಿಗೆ ಕೊಟ್ಟ ನಂತರ ಹಾಕಿರುವುದಾಗಿ ಹೇಳಿದರು. ಪೋಲೀಸು ಸಿಬ್ಬಂದಿಯೇನೋ ಹೆಚ್ಚಾಯಿತು; ಆದರೆ ಪೋಲೀಸಿನವರು ಈ ಕೆಲಸ ತಮ್ಮ ಕರ್ತವ್ಯವೆಂದು ತಿಳಿದುಕೊಂಡು ಮಾಡುತ್ತಿಲ್ಲ. ಇದರಿಂದಲೇ ಅದು ತೃಪ್ತಿಕರವಾಗಿ ನಡೆಯದೇ ಇರುವುದು. ವೃತ್ತಪತ್ರಿಕೆಗಳಲ್ಲಿ ತಾವು ನೋಡಿರಬಹುದು, ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಡಕಾಯಿತಿ ನಡೆದು ಜನರು ಅಲ್ಲಿ ವಾಸಮಾಡುವುದಕ್ಕೆ ಅಸಾಧ್ಯವಾಗಿ ತಾವು ಕೆಳಗಳಲ್ಲಿ ವಾಸಮಾಡುವುದಕ್ಕೇ ಅಸಾಧ್ಯ, ಪಟ್ಟಣಗಳನ್ನಾದರೂ ಸೇರುವುದು ಉತ್ತಮ ಎಂಬ ಮನೋಭಾವ ಅವರಿಗೆ ಬಂದಿದೆ. ಗೃಹಮಂತ್ರಿಗಳಲ್ಲಿಯೂ ಜನರು ಬಂದು ಈ ವಿಷಯವನ್ನು ಅರಿಕೆ ಮಾಡಿಕೊಂಡಿರಬಹುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದು ಸರಿಯಾಗಿ ಜಾರಿ ಆದರೆ ಆ ರೀತಿ ಆಗುವುದೆರ್ಲಾ ಸ್ವಲ್ಪ ಕಡಿಮೆಯಾಗುತ್ತದೆ.

ಶ್ರೀ ಎರ್. ಸಿದ್ದಪ್ಪನವರು.—ನಾನು ಹೇಳುವುದರಲ್ಲಿ ಎಷ್ಟುಮಟ್ಟಿಗೆ ವಾಸ್ತವಾಂಶವಿದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ನಾನು ಮಾನ್ಯ ಗೃಹ ಸಚಿವರಿಗೆ ಹೇಳುವುದು ಇಷ್ಟೆ. ದಾವಣಗೆರೆ ತಾಲ್ಲೂಕಿನಲ್ಲಿ, ಸಂಗನಹಳ್ಳಿ ಎಂಬ ಒಂದು ಹಳ್ಳಿ ಇದೆ. ಅಲ್ಲಿಗೆ ಹೋಗಿ ಈ ಸಂದರ್ಭದಲ್ಲಿ ಏನು ಗದ್ದಾಚೆ ನಡೆಯಿತು ಎಂಬುದನ್ನು ವಿಚಾರಿಸಿದರೆ ನಿಮಗೇ ಗೊತ್ತಾಗುತ್ತದೆ. ಈ ಬಗ್ಗೆ ಮಾನ್ಯ ಸ್ನೇಹಿತರಾದ ಜನಾಬ್ ಇಮಾಂರವರು ಮಾತನಾಡುವಾಗ ಸ್ಥಳೀಯ ಅಧಿಕಾರಿಗಳಿಗೆ ಸರ್ಕಾರದವರು ಏನು ತಿಳಿವಳಿಕೆ ಕೊಟ್ಟರಿ ಎಂದು ಕೇಳಿದರು. ಜನಗಳು ಬಹಳವಾಗಿ ಹೆದರಿಕೊಂಡಿದ್ದಾರೆ. ಏಕೆಂದರೆ ಇನ್ನೊಂದು ಪ್ರಸಂಗ ತಿಳಿಸುತ್ತೇನೆ. ಆ ಸಂಗನಹಳ್ಳಿಯಲ್ಲಿ ಶಿವಪ್ಪನವರು ಎಂಬುವರು ಇದ್ದಾರೆ; ದೊಡ್ಡ ಜಮೀನ್ದಾರರು. ಈಗ ಸುಧಾರಿಸಿದ ಕ್ರಮವನ್ನನುಸರಿಸಿ ವ್ಯವಸಾಯಮಾಡುತ್ತಿದ್ದಾರೆ. ಅಲ್ಲಿ ಕುದಿಯುವುದು ಹೆಚ್ಚಾಗಿ ವ್ಯವಸಾಯದ ಕೆಲಸವನ್ನು ಬಿಟ್ಟಿರುವವರು ಎಷ್ಟೋ ಜನ ಇದ್ದಾರೆ. ಇದರ ಪರಿಣಾಮ ಒಂದು ಬಾಬಿನಲ್ಲ ಅಲ್ಲ; ಅನೇಕ ಬಾಬುಗಳಲ್ಲಿ ಆಗಿತೆಂದರೆ ಹೆಚ್ಚಾಗಿದೆ. ಕಾರಣ ಇಷ್ಟೆ: ವ್ಯವಸಾಯದ ಕನಟನಲ್ಲಿ ಬರುವುದಕ್ಕಿಂತ ಪೆಟ್ಟು ಫಾಯಿದೆ ಇಲ್ಲಿನಿಟ್ ಡಿಸ್ಟಿಲೇಷನಿಂದ ಬರುತ್ತದೆ. ಆದ್ದರಿಂದ ಅದನ್ನು ಬಿಟ್ಟುಬಿಡುತ್ತಾರೆ. ಈ ರೀತಿಯಾಗಿ ಜನಗಳು ಕೆಟ್ಟು ಹೋಗುತ್ತಾರೆಂದು ಅವರು ಒಂದೆರಡು ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟರು. ಆ ಸಮಾಚಾರ ಗೊತ್ತಾಗಿ ಆ ಜನಗಳು ಅವರ ತೋಟದಲ್ಲದ್ದ ಗಿಡಗಳನ್ನೆರ್ಲಾ ಕತ್ತರಿಸಿಹಾಕಿದರು. ಇದನ್ನು ನೋಡಿ ಅವರು ಆ ರೀತಿ ಯಾರು ಮಾಡುತ್ತಾರೆ ಎಂಬುದನ್ನು ಕಾದು ನೋಡಬೇಕೆಂದು ಕೆಲವರಿಗೆ ತಿಳಿಸಿದರು. ಆ ವರ್ತಮಾನ ಗೊತ್ತಾಗುತ್ತರೇ ಅವರನ್ನೇ ಕೊಂದು ಹಾಕುತ್ತೇವೆ ಎಂದು ಹೆದರಿಸಿದರು. ಶಿವಪ್ಪನವರು ಅವರ ತೋಟದಲ್ಲಿ ಒಳ್ಳೆಯ ಪೋಸಂಬು ಗಿಡ ಹಾಕಿದ್ದರು. ಅದಕ್ಕೆ ಅವರೇನು ಮಾಡಿದರು. ಬೇರೆಯವ್ವರು ನುಗ್ಗಿ ಹಾಳುಮಾಡುವುದಕ್ಕೆ ಬದಲಾಗಿ ನನ್ನ ಕಣ್ಣೆದುರಿಗೇ ಹೋಗಲಿ ಎಂದು ಕತ್ತರಿಸಿ ಹಾಕಿದರು. ಈಗ ದಾವಣಗೆರೆ ಟೌನಲ್ಲಿ ವ್ಯಾಪಾರಮಾಡುತ್ತಾ ಇದ್ದಾರೆ. ಇಂತಹ ಪರಿಸ್ಥಿತಿ ಇದೆ. ಬೆಲ್ಲದ ಅಭಾವ ಬಂದಿರುವುದಕ್ಕೆ ಕಳ್ಳಭಟ್ಟಿ ಹೆಚ್ಚಾಗಿರುವುದೇ ಕಾರಣವಾಗಿದೆ. ಪಾನನಿರೋಧ ಜಾರಿಯಲ್ಲಿಲ್ಲದ ಕಾಲದಲ್ಲಿ ಜನಗಳು ಏನುಮಾಡುತ್ತಿದ್ದರು ಎಂದರೆ ಸ್ವಲ್ಪ, ಪ್ರಮಾಣದಲ್ಲಿ ಕುಡಿಯುವುದಕ್ಕೆ ಶೇಂದಿ ಸಿಕ್ಕುತ್ತಿತ್ತು. ಅದರಲ್ಲಿ ಪುಷ್ಟಿ ಕೊಡತಕ್ಕ ಅಂಶ ಇದ್ದು, ಜನರ ಆರೋಗ್ಯಕ್ಕೂ ಹೆಚ್ಚು ಕೆಡಕು ಆಗುತ್ತಿರಲಿಲ್ಲ. ಆದರಿಂದ ಅನುಕೂಲವೇ ಆಗುತ್ತದೆ ಎಂದು ವೈದ್ಯರ ಅಭಿಪ್ರಾಯವೂ ಇದೆ. ಈಗ ಅದು ಸಿಕ್ಕದೇ ಇರುವುದರಿಂದ ಜನಗಳು ಕಳ್ಳಭಟ್ಟಿ ತಯಾರುಮಾಡುವುದು ಹೆಚ್ಚಾಗಿದೆ, ಅದೂ ಅಲ್ಲದೆ ಜನಗಳ ಆರೋಗ್ಯವೂ ಬಹಳ ಕೆಟ್ಟುಹೋಗುತ್ತಾ ಇದೆ. ಆದುದರಿಂದ ನಾನು ಹೇಳುವುದೇನೆಂದರೆ ಈ ನೀತಿಯನ್ನು ಮುಂದುವರಿಸಿಕೊಂಡು ಹೋಗಬೇಡಿ, ಹೋದ ಬಡ್ಜೆಟ್; ಅದಿವೇಶನದಲ್ಲಿ ಪಾನನಿರೋಧ ಜಾರಿಯಲ್ಲಿಲ್ಲದೇ ಇದ್ದಷ್ಟೂ ಡಿಸ್ಟ್ರಿಕ್ಟುಗಳ ಪ್ರತಿನಿಧಿಗಳು ಆ ಡಿಸ್ಟ್ರಿಕ್ಟುಗಳಲ್ಲೂ ಜಾರಿಮಾಡಿ ಎಂದು ಅರಿಕೆಮಾಡಿದ್ದರು. ಈಗ ನನ್ನ ಅಭಿಪ್ರಾಯದಲ್ಲಿ ಆ ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ಕೊಡುವುದು ಅನಾವಶ್ಯಕ. ಏಕೆಂದರೆ ಇದನ್ನು ನಿಲ್ಲಿಸುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಜಾರಿಗೆ ತಂದಿರುವ ಪ್ರದೇಶದಲ್ಲೂ ಕೂಡ ಬಹಳ ತೀವ್ರವಾಗಿ ಆರೋಚನೆಮಾಡಿ ಇದರಿಂದ ಪ್ರಯೋಜನವಾಗುವುದಿಲ್ಲ ಎಂಬ ಭಾವನೆ ಬಂದಿರುವ ಹಾಗೆ ಕಾಣುತ್ತದೆ. ನೆನ್ನೆ ದಿನ 'ಬ್ಲಿಟ್ಸ್‌ಪೇಪರ್'ನಲ್ಲಿ ಓದಿದೆ. ಮಧ್ಯ ಪ್ರದೇಶದಲ್ಲಿ ಸರ್ಕಾರದವರು ಹೈಕೋರ್ಟು ಜಡ್ಜರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕಮಾಡಿ, ಇದನ್ನು ಮುಂದುವರಿಸಿಕೊಂಡು ಹೋಗುವುದರಿಂದ ಪ್ರಯೋಜನವಿದೆಯೇ, ಇಲ್ಲವೇ ಮತ್ತು ಈಗ ಜಾರಿಯಲ್ಲಿರುವ ಪ್ರದೇಶದಲ್ಲಿ ಏಕೆ ತೆಗೆಯಬಾರದು ಎಂಬ ವಿಚಾರಗಳನ್ನು ಪರಿಶೀಲನೆಮಾಡಬೇಕೆಂದು, ಒಂದು ವಿಷಯಾನುಕ್ರಮಣಿಕೆಯನ್ನು ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ.

*The Hon'ble Sri K. CHENGALARAYA REDDY (Chief Minister).—We are also considering all aspects of the matter and that is why we are going a bit cautiously with regard to the implementation of the programme. Not that we have lost faith in Prohibition but we have slowed down the pace of introducing prohibition. We want to ascertain as to how far we have succeeded, where the difficulties have been and how to get over the difficulties, before extending the area of prohibition further. It is only keeping all these aspects in mind we are pursuing our programme.

*Speech not revised by the Member concerned.

(THE HON'BLE SRI K. CHENGALA-RAYA REDDY.)

And during the next Budget Session we shall be able to discuss this subject in greater detail. I just wanted to intervene at this stage to say what the policy or the idea of the Government is with regard to this.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಿಮ್ಮ ಮಾಡುವವರಿಗೆ ಈಗ ಮಂಡ ಹಾಕಿಕೊಟ್ಟಹಾಗೆ ಆಯಿತು.

ಶ್ರೀ ಎಲ್. ಸಿದ್ದಪ್ಪನವರು.—ನಿಜವಾಗಿಯೂ ಒಂದುವೇಳೆ ದೋಷಾರೋಪಣೆ ಬಂದರೆ ಅದನ್ನು ನನ್ನಮೇಲೆ ಹಾಕಿ. ಇದನ್ನು ಮುಂದುವರಿಸಿಕೊಂಡು ಹೋಗುವುದರಿಂದ ಪ್ರಯೋಜನವಿಲ್ಲ. ಸರ್ಕಾರಕ್ಕೆ ಬರುವ ಆದಾಯ ಕಡಮೆಯಾಗುವುದಲ್ಲದೇ ಜನಗಳಿಗೆ ಉಪಯೋಗವಾಗತಕ್ಕ ದೇಶಾಭಿವೃದ್ಧಿ ಕೆಲಸ ಕಾರ್ಯಗಳಿಗೆ ಹಣ ಸಿಕ್ಕದೇ ತೊಂದರೆಯಾಗುತ್ತದೆ. ಮತ್ತು ಇದನ್ನು ಜಾರಿಮಾಡುವುದಕ್ಕೆ ವೃಥಾ ಹಣ ಖರ್ಚಾಗುತ್ತದೆ. ಜನಗಳಿಗೆ ಯಾವ ಸಹಾಯವೂ ಆದಂತಾಗುವುದಿಲ್ಲ. ಈಗ ನೀವು ಯಾವುದಾದರೂ, ಪಾಠಶಾಲೆ, ಕೆರೆ, ಕಟ್ಟೆಗಳಿಗೆ ಹಣ ಬೇಕೆಂದರೆ ಇಲ್ಲವೆಂದು ಹೇಳುತ್ತೀರಿ. ಇಂಥಾ ಬಾಬುಗಳಿಗೆ ಹಣ ಕೊಡದೇ ಉಳಿತಾಯಮಾಡಬೇಡಿ. ಪಾನನಿರೋಧ ಜಾರಿಮಾಡದೇ ಕೆಂಬ ತತ್ವ ಒಪ್ಪಿಕೊಂಡು ಕೆಲವು ಡಿಸ್ಪ್ರಿಕ್ಟ್‌ಗಳಲ್ಲಿ ಜಾರಿ ಮಾಡಿದ್ದೀರಿ. ಅದನ್ನು ಈಗ ಹೇಗೆ ಹಿಂದಕ್ಕೆ ತೆಗೆದುಕೊಳ್ಳುವುದು, ಹಿಂದಕ್ಕೆ ತೆಗೆದುಕೊಂಡರೆ ತಮಾಷೆ ಮಾಡುತ್ತಾರೆಯೋ ಏನೋ ಎಂಬ ಮನೋಭಿಪ್ರಾಯ ತಮಗೆ ಇರಬಹುದು. ಒಂದು ವೇಳೆ ಇದ್ದರೂ ಕೂಡ ಇದನ್ನು ಜಾರಿಮಾಡುವುದರಿಂದ ಪ್ರಯೋಜನವಿಲ್ಲ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಧೈರ್ಯವಾಗಿ ಹಿಂದಕ್ಕೆ ತೆಗೆದುಕೊಳ್ಳಿ. ಈಗಿನ ಹಣಕಾಸಿನ ಸ್ಥಿತಿಯಲ್ಲಿ I have absolutely no faith. I am convinced more than ever that prohibition will not be a success and the Government are incapable of enforcing it.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು).—ಈ ನೀತಿಯನ್ನು ಒಪ್ಪಿಕೊಂಡವರು ಯಾರು? ಯಾವ ಮಂತ್ರಿಗಳು ಇವ್ವಾಗ?

—ಶ್ರೀ ಎಲ್. ಸಿದ್ದಪ್ಪನವರು.—ಜಾರಿಮಾಡುವುದಕ್ಕೆ ಆಗುವುದಿಲ್ಲ ಎಂದು ತಿಳಿವಳಿಕೆ ಬಂದಮೇಲೆ ಸಾಧ್ಯವಿಲ್ಲ ಎಂದು ಧೈರ್ಯ ತೆಗೆದುಕೊಂಡು ಈಗ ಜಾರಿಮಾಡಿರುವುದನ್ನು ತೆಗೆದುಹಾಕುವುದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ಧೈರ್ಯ ತೆಗೆದ ಕೊಳ್ಳಿ ಎಂದು ಹೇಳುತ್ತೇನೇ. ಅಷ್ಟೆ. ನಿಜವಾಗಿಯೂ ಪಾನನಿರೋಧವನ್ನು ಜಾರಿಗೆ ತಂದು, ಸಂಪೂರ್ಣವಾಗಿ ಕುಡಿಯುವುದನ್ನು ನಿಲ್ಲಿಸಬೇಕೆಂದು ಪ್ರಯತ್ನಪಟ್ಟರಿ. ಆದರೆ ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಎಂದು ತಮಗೇ ಚೆನ್ನಾಗಿ ಗೊತ್ತಾಗಿದೆ. ತಾವು ಅದನ್ನು ಹೇಳದೇ ಇದ್ದರೂ.....

ಮಾನ್ಯ ಶ್ರೀ ಎಚ್ ಸಿದ್ದಯ್ಯನವರು.—ಆ ಮಾತು ನಾವು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ತಾವು ಹೊರಗೆ ಭಾಷಣ ಮಾಡುವಾಗ ಹೇಳದೇ ಇದ್ದರೂ ಕೂಡ.....

The Hon'ble Sri K. CHENGALA-RAYA REDDY.—We shall not hesitate to place all the cards on the table of the House. It is a very important matter involving the welfare of the nation and this is seized of by the Central Government, if I may say so, and the Hon'ble Member may trust us, that whatever else we may be lacking in, we are not lacking in courage to do the right thing at the right moment.

*ಶ್ರೀ ಎಲ್. ಸಿದ್ದಪ್ಪನವರು.—ಏನೇ ಆಗಲೀ ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೆ. ನಮ್ಮನೆ 4 ಲಕ್ಷ 28 ಸಾವಿರ ರೂಪಾಯಿ ಅನ್ಯಾಯವಾಗಿ ಖರ್ಚು ಮಾಡುತ್ತೀರಿ. ಆ ರೀತಿ ಖರ್ಚು ಮಾಡುವುದು ಬೇಡ, ನಿಲ್ಲಿಸಿಬಿಡಿ. ಕುಡಿಯುವವರು ಕುಡಿದೇ ಕುಡಿಯುತ್ತಾರೆ, ಅವರ ಸಂಖ್ಯೆ ದಿನೇ ದಿನೇ ಜಾಸ್ತಿಆಗುತ್ತಾ ಇದೆ. ಇದರಿಂದ ದೇಶದ ಮೇಲೆ ಯಾವ ಕೆಡುಕ್ಕುಪರಿಣಮಿಸಬೇಕೋ ಅದು ಆಗುತ್ತಾ ಇದೆ. ಅದರ ಜೊತೆಗೆ ಈ 4 ಲಕ್ಷ 28 ಸಾವಿರ ರೂಪಾಯಿನ ಖರ್ಚು ಅನ್ಯಾಯವಾಗಿ ಹಾಳಾಗುತ್ತದೆ. ಆದ್ದರಿಂದ ಈ ಖೋತಾ ನಿರ್ಣಯವನ್ನು ಪುಷ್ಟೀಕರಿಸುತ್ತಾ, ಸರ್ಕಾರದವರು ಹೇಳತಕ್ಕ ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ಬಾಬಿಗೆ ಸರ್ಕಾರದವರು ಈ ಮೊಬಲಗನ್ನು ಖರ್ಚು ಮಾಡಬೇಕಾಗಿಲ್ಲ. ಇದಕ್ಕೆ ಸಭೆ ಸಮ್ಮತಿ ಕೊಡಬಾರದು ಎಂದು ನನ್ನಅಭಿಪ್ರಾಯ.

ಲೋಕಸೇವಾನಿರತ ಶ್ರೀ ಎಂ. ಹನುಮಂತಯ್ಯನವರು (ದೆಂಗಳೂರು ಜಿಲ್ಲೆ—ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷರೇ, ನಮ್ಮ ಮಿತ್ರರಾದ ಜನಾಬ್ ಇಮಾಂರವರು ತಂದಿರತಕ್ಕ ಖೋತಾ ನಿರ್ಣಯವನ್ನು ವಿರೋಧಿಸುತ್ತಾ, ಕೆಲವು ವಿಷಯಗಳನ್ನು ಮಾತ್ರ ನಥಿಯ ಗಮನಕ್ಕೆ ತರಬೇಕೆಂದಿದ್ದೇನೆ. ಸಂಸ್ಥಾನದಲ್ಲಿ ಮದ್ಯಪಾನವನ್ನು ಪಜಾ ಮಾಡಬೇಕೆಂದು ನಾನು ಹಿಂದಿನ ಸರ್ಕಾರದವರನ್ನು ಸುಮಾರು 20 ವರ್ಷಗಳಿಂದಲೂ ಕಣ್ಣೀರು ಹಾಕಿ ಕೇಳಿಕೊಳ್ಳುತ್ತಿದ್ದೆ. ಅವರ ಕೈಯಲ್ಲಿ ಪಜಾ ಮಾಡಲಾಗಲಿಲ್ಲ. ಅಂಥಾದ್ದನ್ನು ಈಗಿನ ಸರ್ಕಾರದವರು ಪಜಾ ಮಾಡಿರುವುದು ಬಹಳ ಸಂತೋಷಕರ. ಇದರಿಂದ ದೇಶಕ್ಕೆ ನಿಜವಾಗಿಯೂ ಬಹಳ ಅನುಕೂಲವಾಗಿದೆ. ನಾನು ಸಂಸ್ಥಾನಾದ್ಯಂತ ತುಮಕೂರು, ಕೋಲಾರ ಮುಂತಾದ ಕಡೆಗಳಲ್ಲೆಲ್ಲಾ ತಿರುಗಿನೋಡಿದ್ದೇನೆ. ಅನೇಕ ಅಧಿಕಾರ್ಯಾಚರರು, ಯಾರನ್ನು ನೀವೀಗ ಕುಡಿತಕ್ಕೆ ಸಿಕ್ಕಿದ ಜನರೆಂದು ಹೇಳುತ್ತಿದ್ದೀರೋ, ಅವರೆಲ್ಲಾ ಸರ್ಕಾರದವರು ತಮಗೆ ಮಹದುಪಕಾರ ಮಾಡಿದರೆಂದು ಹೇಳುತ್ತಿದ್ದಾರೆ. ಮಾದ್ಯಪಾನ ಪಜಾಮಾಡಿದ್ದರಿಂದ ನಾವೆಲ್ಲಾ ಅನ್ನ ಬಟ್ಟೆ ಮಾಡಿಕೊಳ್ಳುವ ಸ್ಥಿತಿಗೆ ಬಂದಿದ್ದೇವೆಂದು ಕೃತಜ್ಞತಾಪೂರ್ವಕವಾಗಿ ತಮ್ಮನ್ನು ನೆನೆಯುತ್ತಿದ್ದಾರೆ. ಹಿಂದಿನ ಸರ್ಕಾರದವರೇ ಬಹಳ ದಿವಸಗಳ ಹಿಂದೆಯೇ ಇದನ್ನು ತೆಗೆದು ಹಾಕಿದ್ದರೆ ಇನ್ನೂ ಚೆನ್ನಾಗಿತ್ತು. ಈ ಸರ್ಕಾರವಾದರೂ ಎಷ್ಟೇ ನಷ್ಟವಾದರೂ ಲೆಕ್ಕಿಸದೆ ದೊಡ್ಡ ಮನಸ್ಸುಮಾಡಿ ಆ ಬಡ ಜನರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈಗ ಆ ಜನರು ಹೊಟ್ಟೆ ಬಟ್ಟೆಗೆ ಸರಿ ಮಾಡಿಕೊಂಡು ಒಳ್ಳೆಯ ಸ್ಥಿತಿಯಲ್ಲಿದ್ದಾರೆ. ಕೆಲವರು ಹಣವನ್ನೂ ಕೂಡಿಟ್ಟು ಧನಿಕರಾಗಿದ್ದಾರೆ. ಹೀಗಿರುವಾಗ ಈ ಕಾಲದಲ್ಲಿ ನಮ್ಮ ಮಾನ್ಯ ಮಿತ್ರರಾದ ಜನಾಬ್ ಇಮಾಂರಂಥಾ ಮೇಧಾವಿಗಳು, ತಿಳಿದಿರತಕ್ಕಂಥವರು

* Speech not revised by the Member concerned.

ಬಹಳವಾಗಿ ಕೆಲಸ ಮಾಡಿರತಕ್ಕಂಥವರು ಪಾನ ನಿರೋಧವನ್ನು ನಿಲ್ಲಿಸಬೇಕೆಂದು ನಿರ್ಣಯವನ್ನು ತಂದಿರುವುದು ಆಶ್ಚರ್ಯವಾಗಿದೆ. ಇದೇ ಸಂದರ್ಭದಲ್ಲಿ ಶ್ರೀ ಸಿದ್ದಪ್ಪನವರು ಇದನ್ನು ವಿರೋಧಮಾಡಿದ್ದು ಬಹಳ ವಿಷಾದ ಎಂದು ತಿಳಿಸಲಿಚ್ಛಿಸುತ್ತೇನೆ ಆದರೆ ಅದೇ ಶ್ರೀ ಗುಂಡಪ್ಪಗೌಡರು ಕೊಟ್ಟಂಥ ಸಲಹೆ ಚೆನ್ನಾಗಿದೆ. ನಮ್ಮ ರೀತಿ ನೀತಿಗಳನ್ನು ಬದಲಾಯಿಸಬೇಕು. ಪಾಪ-ಪುಣ್ಯದ ದೃಷ್ಟಿಯಿಂದ ಈ ವಿಚಾರದಲ್ಲಿ ಎಲ್ಲರೂ ಸಹಾಯ ಮಾಡಬೇಕು ಎಂದು ಹೇಳಿ ಕೆಲವು ಕಡೆ ಸೀಸೆಗಳನ್ನು ಒಡೆದುಹಾಕಿದ್ದನ್ನು ಹೇಳಿದರು. ಅವರು ಮಾಡಿದ್ದು ಸರಿ; ಅದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ಸರ್ಕಾರದವರು ಹಿಂಜರಿಯದೆ ಕೂಡಲೇ ಇನ್ನೂ ಎಲ್ಲಾ ಕಡೆ ಗಳಲ್ಲೂ ಬಡಾ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಬ್ಬ ಸದಸ್ಯರು ಹೇಳಿದರು, ಕುಡಿತ ತಪ್ಪಿಸಿದ್ದರಿಂದ ಹೆಚ್ಚಿಗೆ ವ್ಯವಸಾಯಕ್ಕೆ ಅನಾನುಕೂಲವಾಗಿದೆ ಎಂದು. ಇದನ್ನು ಖಂಡಿತ ಯಾರೂ ಒಪ್ಪುವುದಕ್ಕಾಗುವುದಿಲ್ಲ. ಕುಡಿತ ಕುಡಿದು ಜ್ಞಾನ ತಪ್ಪಿ ಬಿದ್ದಿರುವವನು ಹೇಗೆ ತಾನೆ ಕೆಲಸ ಮಾಡುತ್ತಾನೆ! ಕೊಟ್ಟವರ ದುಡ್ಡು ಏನು ಕೊಡುತ್ತಾನೆ. ಆದ್ದರಿಂದ ಈಗ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಎಷ್ಟೇ ಕಷ್ಟ ಬಂದರೂ ಧೈರ್ಯವಾಗಿ ಜಾರಿಗೆ ತಂದಿರುವ ಕಾರ್ಯವನ್ನು ಏನೇ ಆದರೂ ಕೈಬಿಡದೆ ಬಾಕಿ ಡಿಸ್ಟ್ರಿಕ್ಟ್‌ಗಳಲ್ಲೂ ಮುಂದುವರಿಸಿ ದೇಶಾದ್ಯಂತವೂ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ):— ಮಾನ್ಯ ಅಧ್ಯಕ್ಷರೇ, ಜನಾಬ್ ಇಮಾಂಸಾಹೇಬರು ತಂದಿರತಕ್ಕ ಕತ್ತರಿ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಮಂತ್ರಿ ಮಂಡಲದವರೇಕೋ ವಿರೋಧ ಪಂಗಡದವರ ಜೊತೆಗೆ ಮೆಲ್ಲಗೆ ಸೇರಿಕೊಳ್ಳುತ್ತಿರುವಹಾಗಿದೆಯೆಲ್ಲಾ ಎಂದು ನನಗೆ ವಿಷಾದವಾಗುತ್ತದೆ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— No, No! ಹಾಗೇನೂ ಇಲ್ಲ!

ಶ್ರೀ ಎ. ಭೀಮಪ್ಪನಾಯಕರು.—ಅದೇನೋ ತಾವು ನಭೆಯಲ್ಲ, ಈ ವಿಷಯವನ್ನು ಪುನರಾಲೋಚನೆ ಮಾಡಬೇಕೆಂದು ಯೋಚಿಸಿದ್ದೇವೆಂದು ಹೇಳಿದಿರಿ. ಇದಕ್ಕೆ ನಾನೇನು ಮಾಡಲಿ! ನೀವೇನೋ ಈಗ ಹೀಗೆ ಹೇಳಿದರೂ ನಿಮ್ಮ ಆಗಿನ ಉತ್ತರವನ್ನು ನೋಡಿದರೆ ಏಕೋ ಒಂದೊಂದು ಹೆಜ್ಜೆಯಾಗಿಯೂ ಹಿಂದಕ್ಕೆ ಸರಿಯುತ್ತಿರುವಂತೆ ಧ್ವನಿ ಕೊಡುತ್ತದೆ.

ಅದೇನೇ ಇರಲಿ, ಈಗ ಇಲ್ಲ ಕೇಳಿರತಕ್ಕದ್ದು 7 ಲಕ್ಷ ರೂಪಾಯಿಗಳಾಗಲಿ ಅಥವಾ 70 ಲಕ್ಷ ರೂಪಾಯಿಗಳಾಗಲಿ ಅದನ್ನು ಕೊಟ್ಟೇ ಕೊಡಬೇಕು. ಯಾವುದಾದರೂ ಒಂದು ಯೋಜನೆಯನ್ನು ಒಮ್ಮೆ ತಂದರೆ ಅದನ್ನು ಕೊನೆಯವರೆಗೂ ಏನೇ ಆದರೂ ಯಶಸ್ವಿಯಾಗಿ ನಡೆಸಿರಿ ಎಂದು ನೀವೇ ಒಮ್ಮೆ ಹೇಳುತ್ತೀರಿ. ಅದೇ ಇನ್ನೊಮ್ಮೆ ದುಡ್ಡೇಕೆ ಹೀಗೆ ಖರ್ಚು ಮಾಡುತ್ತಿದ್ದೀರಿ ಎಂದು ಹೇಳುತ್ತೀರಿ! ಇದರ ನೀತಿಯೇ ನನಗರ್ಥವಾಗುವುದಿಲ್ಲ. ಒಂದು ಯೋಜನೆಯನ್ನು ಹಾಕಿಕೊಂಡ ಮೇಲೆ ಮೊದಲನೆಯ ಸಾರಿ ಆಗಲಿಲ್ಲವೆಂದು ಹೇಳಿ, ಅದನ್ನು ನಿಲ್ಲಿಸಿಬಿಡಿಯೆಂದು ಹೇಳುವುದು ಸರಿಯಲ್ಲ. ಯಾವಾಗ ಎಲ್ಲಾ ಪ್ರಯತ್ನಗಳೂ ನಡೆದು ಕೊನೆಗೂ ಜಯಪ್ರದವಾಗದೆ ಹೋಯಿತೋ ಆಗ ಬೇಕಾದರೆ ನೀವು ಯೋಜನೆಯನ್ನು ಕೈಬಿಡಿಯೆಂದು ಹೇಳಬಹುದು. ಅಂಥಾದ್ದರಲ್ಲಿ ಈಗ ತಾವು ಏನು ತಾನೆ ಪ್ರಯತ್ನ ಮಾಡಿದ್ದೀರಿ? ಐದು ವರ್ಷದ ಅವಧಿಯನ್ನಾದರೂ ಕೊಟ್ಟು ಮೂರು ಕೋಟಿ ರೂಪಾಯಿಗಳನ್ನು ಒಡಗಿಸುತ್ತೇವೆ ಎಂದಿದ್ದರೆ ಪರವಾಗಿಲ್ಲ. ಹಾಗೇನೂ ಇಲ್ಲದೆ ಇದ್ದದ್ದರಲ್ಲೇ ವಡಿ, ಸದ್ಯಕ್ಕೆ ಹಣವಿಲ್ಲ ಎನ್ನುತ್ತಾ, ಹೋದರೆ ಹೇಗೆ ಸಾಧ್ಯ! ಎಷ್ಟೋ ಕಾಲದಿಂದ ಮೈಗೆ ಅಂಟಿಕೊಂಡಿರುವ ದುರಭ್ಯಾಸವನ್ನು ಬೇಗ ಹೋಗರಾಡಿಸುವುದಕ್ಕೆ ಆಗುತ್ತದೆಯೇ! ನಂಗನಹಳ್ಳಿ ಶಿವಣ್ಣ ವ್ಯವಸಾಯ ಮಾಡುವುದನ್ನು ಬಿಟ್ಟು ಬಿಟ್ಟು ದಾವಣಗೆರೆಗೆ ವ್ಯಾಪಾರ ಮಾಡುವುದಕ್ಕೆ ಹೋದ ಎಂದು ನನ್ನ ಮಿತ್ರರಾದ ಸಿದ್ದಪ್ಪನವರು ದೊಡ್ಡದಾಗಿ ಉದಹರಿಸಿದರು! ದಾವಣಗೆರೆಗೆ ವ್ಯಾಪಾರಕ್ಕೆ ಹೋದ ಮಾತ್ರಕ್ಕೇ ವ್ಯವಸಾಯವನ್ನು ಬಿಟ್ಟುಬಿಟ್ಟರೆಂದರ್ಥವೇ! ವ್ಯವಸಾಯದ ಜೊತೆಗೆ ಆ ವ್ಯಾಪಾರವನ್ನೂ ಇಟ್ಟುಕೊಂಡರೆ ಇನ್ನೂ ಹೆಚ್ಚಿಗೆ ಸಂಪಾದನೆ ಮಾಡಿಕೊಳ್ಳಬಹುದೆಂದು ಅವರು ಹೋಗಿರಬಹುದು. ಅಷ್ಟೇ ಹೊರತು ವ್ಯವಸಾಯ ಬಿಟ್ಟರು ಎಂದು ಹೇಳುವುದಕ್ಕಾಗುವುದಿಲ್ಲ

ಶ್ರೀ ಎಸ್. ಸಿದ್ದಪ್ಪನವರು.—ವ್ಯವಸಾಯವನ್ನು ಬಿಟ್ಟರೆಂದು ನಾನು ಹೇಳಲಿಲ್ಲ. ವ್ಯವಸಾಯ ಕಡಿಮೆ ಮಾಡಿ ದಾವಣಗೆರೆಗೆ ವ್ಯಾಪಾರಕಾಗಿ ಹೋಗಿದ್ದಾರೆಂದು ಹೇಳಿದೆ.

ಶ್ರೀ ಎ. ಭೀಮಪ್ಪನಾಯಕರು.—ವ್ಯವಸಾಯದ ಜೊತೆಗೆ ಎರಡನ್ನೂ ಮಾಡುವುದಕ್ಕೆ ಸಾಧ್ಯವಿಲ್ಲದೆ ನಡ್ಯಕ್ಕೆ ಹಾಗೆ ಮಾಡಿರಬಹುದು. ಈಗ ಅವರೇ ತಮಗೊಂದು ಟ್ರಾಕ್ಟರ್ ಬೇಕೆಂದು ಸರ್ಕಾರವನ್ನು ಕೇಳಿದ್ದಾರೆ. ಶ್ರೀ ಸಿದ್ದಪ್ಪನವರೂ ಅವರಿಗೆ ಕೊಡಿ ಎಂದು ಹೇಳಿದ್ದಾರೆ. ಅವರು ಟ್ರಾಕ್ಟರ್ ತೆಗೆದುಕೊಂಡು ವ್ಯವಸಾಯ ಮಾಡಿಯೇ ಮಾಡುತ್ತಾರೆ. ಆದ್ದರಿಂದ ಅವರು ನಿಜವಾಗಿಯೂ ವ್ಯವಸಾಯಗಾರರೇ. ಆ ದೃಷ್ಟಿಯಿಂದಲೇ ಅವರು ಸಹಾಯ ಮಾಡಬೇಕಾದ್ದು ನ್ಯಾಯವೆಂದು ಹೇಳುತ್ತಾರೆಯೇ ಹೊರತು ಅವ್ಯವಹಾರಿಕವಾದ್ದನ್ನು ತಡೆಯುವುದನ್ನು ಬೇಡವೆನ್ನುತ್ತಾರೆಯೇ? ನಿಜ. ಅವರು ಹೇಳುವಂತೆ ಪ್ರತಿಯೊಂದು ಮನೆಯೂ ಕಳ್ಳಬಟ್ಟಿ ಸಾರಾಯಿ ಗೃಹವಾಗಿ ಪರಿಣಮಿಸಿರಬಹುದು. ಆ ದೃಷ್ಟಿಯಿಂದಲೇ ಎಷ್ಟೇ ಖರ್ಚಾಗಲೀ ಆದನ್ನು ಸ್ವಾಗತಿಸಿ ಇನ್ನೂ ಹೆಚ್ಚಿಗೆ ಖರ್ಚು ಮಾಡುವುದಕ್ಕೆ ತಯಾರಾಗಿದ್ದೇವೆಂದು ಹೇಳಬೇಕು. ಮಾನ್ಯ ಸಿದ್ದಪ್ಪನವರು 6000 ಕಳ್ಳತನದ ಕೇಸುಗಳಾಗಿರುವ ವಿಚಾರದಲ್ಲಿ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಅದಕ್ಕೇನು ಮಾಡುವುದು! ದುರಭ್ಯಾಸ, ದುಷ್ಟ ರಾಭಗಳ್ಳಕಡೆ ಜನರ ಮನಸ್ಸು ಹೋಗುತ್ತಿದೆ!! ಜನರ ನೈತಿಕ ಮಟ್ಟ ಅಷ್ಟು ಕೆಳಕ್ಕೆ ಇಳಿದು ಹೋಗಿದೆ!! ನಿಜವಾಗಿ ಹೇಳುವುದಾದರೆ, ಇದುವರೆಗೂ ಯಾವ ಹರಿಜನರನ್ನು, ಆದಿಕರ್ನಾಟಕರನ್ನು ಕುಡಿಯುತ್ತಾರೆಂದು ಹೇಳುತ್ತಿದ್ದೆವೋ ಅವರೇನೂ ಈಗ ಕುಡಿಯುತ್ತಿಲ್ಲ. ಬಹಳ ಮಟ್ಟಿಗೆ ಕಡಿಮೆ ಮಾಡಿದ್ದಾರೆ. ಇಂದೇನಿದ್ದರೂ ಕುಡಿಯುವವರೆಂದರೆ, ಯಾರ್ಯಾರು ಅನುಕೂಲಸ್ಥರಾಗಿ ಐಶ್ವರ್ಯವಂತರಾಗಿದ್ದಾರೋ ಅವರು ಒಂದಕ್ಕೆ ಹತ್ತರಷ್ಟು ಕೊಟ್ಟು ಕಳ್ಳತನದಿಂದ ತರಿಸಿಕೊಳ್ಳುತ್ತಿದ್ದಾರೆ. ಕಳ್ಳತನದಿಂದ ತರಿಸಿಕೊಳ್ಳುವವರೇ ಅನುಕೂಲಸ್ಥರು. ಆದ್ದರಿಂದ ಅಂಥವರ ಹಣ ಈ ರೀತಿ ಖರ್ಚಾದರೂ ವ್ಯಸನವಿಲ್ಲ. ಅದರೆ ನಾನು ಹೇಳುವುದಿಷ್ಟೆ. ಯಾವುದರಿಂದ ಬಡವರಿಗೆ ಅನುಕೂಲತೆಯಾಗಿದೆಯೋ, ಯಾವುದರಿಂದ ಅವರ ಆರ್ಥಿಕ ಮಟ್ಟ ಮೇಲಕ್ಕೇರುತ್ತಿದೆಯೋ ಅದಕ್ಕೆ ಸಹಾಯಮಾಡುವುದಕ್ಕಾಗಿ ಏನೇ ಆದರೂ ಖರ್ಚು ಮಾಡಲೇಬೇಕು. ಅನೇಕ ಸ್ಥಳಗಳಲ್ಲಿ ಕುಡಿಯುವವರ ತಾಂಡಾಗಳು ಹುಟ್ಟಿಕೊಂಡಿವೆ. ಅಲ್ಲಿಗೆ ಪೋಲೀಸಿನವರು ಹೋಗಿ

(ಶ್ರೀ ಎ. ಭೀಮಪ್ಪನಾಯಕರು.)

ಕಾರ್ಯಾಚರಣೆ ನಡೆಸಲು ಪ್ರಾರಂಭಿಸಿದಾಗ ಪೋಲೀಸಿನವರನ್ನೇ ಹೊಡೆಯಲು ಆ ತಾಂಡಾದವರೆಲ್ಲಾ ಬಂದರೂ ಯಾರೂ ಪೋಲೀಸಿನವರಿಗೆ ಸಹಾಯ ಮಾಡಲಿಲ್ಲ. ಇಂಥ ಪರಿಸ್ಥಿತಿಯಿರುವಾಗ ಹೇಗೆ ಇದನ್ನು ನಿಲ್ಲಿಸುವುದು ಸುಲಭಸಾಧ್ಯ? ಇನ್ನೂ ನಾವು ಪ್ರಾರಂಭಮಾಡಿ ಒಂದೆರಡು ವರ್ಷಗಳು ಕೂಡ ಆಗಿಲ್ಲ! ಇಷ್ಟಕ್ಕೇನೇ ಬಿಟ್ಟು ಬಿಡಿ, ಏನೂ ಫಲ ಕಾಣಲಿಲ್ಲವೆಂದರೆ ಹೇಗೆ? ಯೋಜನೆಯನ್ನು ಪ್ರಾರಂಭಮಾಡಿದ ಸರ್ಕಾರ ಅದನ್ನು ತುದಿ ಮುಟ್ಟುವವರೆಗೂ ನೋಡಬೇಡವೇ? ಮಧ್ಯದಲ್ಲೇ ಇನ್ನೂ ಏನೂ ಹೆಚ್ಚಿಗೆ ಆಗಲಿಲ್ಲ, ಹಿಂದಕ್ಕೆ ಹೋಗಿಬಿಡಿ ಎಂದು ಹೇಳಿದರೆ ಸರಿಯೆ? ಅದರಲ್ಲೂ ಶ್ರೀ ಸಿದ್ದಪ್ಪನವರು, ಬಡವರ ಕಷ್ಟ ಸುಖಗಳನ್ನು ತಿಳಿದಿರುವವರು ಇದನ್ನು ಇನ್ನೂ ಯಶಸ್ವಿ ಯಾಗಿ ನಡೆಯಿಸಿ ಅವರ ಆರ್ಥಿಕ ಸ್ಥಿತಿಯನ್ನು ಹೆಚ್ಚು ಮಾಡಿ ಎಂದು ಹೇಳದೆ ಇದನ್ನು ಇಲ್ಲಗೇ ನಿಲ್ಲಿಸಿ ಹಿಂದಿನ ಸ್ಥಿತಿಗೆ ಪರಿವರ್ತನೆ, ಯಾಗಿ ಎಂದು ಹೇಳಿದ್ದು ಬಹಳ ವಿಷಾದಕರ!!

ಶ್ರೀ ಎಲ್. ಸಿದ್ದಪ್ಪನವರು.—ಅಷ್ಟು ಹೇಳಬೇಕಾದರೆ ಬಹಳ ವಿಶೇಷ ಕಾರಣಗಳೇ ಇರಬೇಕಲ್ಲವೇ!!

ಶ್ರೀ ಎ. ಭೀಮಪ್ಪನಾಯಕರು.—ಅದಕ್ಕೆ ಬದಲು ಒಂದು ಹತ್ತು ವರ್ಷದ ಕಾರಾವಧಿ ಕೊಟ್ಟು ಹೆಚ್ಚಿಗೆ ಹಣ ಕೊಟ್ಟು ನೋಡಿ. ಮದ್ರಾಸಿನವರಿಗೆ ಕೇಂದ್ರ ಸರ್ಕಾರದಿಂದ ಇದೇ ರೀತಿ ಸೂಚನೆ ಬಂದಿದ್ದರೂ ಅಲ್ಲಿನ ಮುಖ್ಯ ಮಂತ್ರಿಗಳು ಏನು ಹೇಳಿದರು? ಏನೇ ಆಡ್ಡಿ ಬರಲಿ ಮದ್ರಾಸಿನಲ್ಲಿ ನಾವು ಸಂಪೂರ್ಣ ಪಾನ ನಿರೋಧವನ್ನು ತಂದೇ ತರುತ್ತೇವೆಂದು ಹೇಳಿ ಅದೇ ರೀತಿ ಎಷ್ಟು ಖರ್ಚು ಮಾಡುತ್ತಿದ್ದಾರೆ, ನೋಡಿ!! ಆದ್ದರಿಂದ ನಾವೂ ಒಂದು ಅವಧಿಯನ್ನು ಕೊಟ್ಟು ಕಾದು ನೋಡಬೇಕು. ಸುಮ್ಮನೆ ಒಂದು ಒಳ್ಳೆಯ ನಾಯಿಯ ತಲೆಯನ್ನು ಕಡಿಯಬೇಕೆಂದು ಯೋಚನೆ ಮಾಡಿ ಅದನ್ನು ಹುಚ್ಚನಾಯಿ ಎಂದು ಹೇಳಿಬಿಟ್ಟು ಹೊಡೆದು ಹಾಕಿಬಿಡಬಹುದು. ಆದ್ದರಿಂದ ಈಗಲೇನೇ ಈ ಪಾನನಿರೋಧದಿಂದ ದುಷ್ಪರಿಣಾಮವಾಯಿತೆಂದು ಹೇಳುವುದು ಬೇಡ. ಇನ್ನೂ ಎಷ್ಟೇ ಖರ್ಚಾಗಲೀ ಖರ್ಚು ಮಾಡಿ ನೋಡೋಣ. ಕೊನೆಯವರೆಗೂ ಪ್ರಯತ್ನ ಮಾಡಿ, ಅಲ್ಲಿಗೂ ಸಾಧ್ಯವಾಗದೆ ಇದ್ದರೆ ಕೈಬಿಡುವ ಪ್ರಶ್ನೆ ತಾನಾಗಿಯೇ ಬರುತ್ತದೆ, ಒಂದು ವರ್ಷದಲ್ಲೇ ಆಗಬೇಕಾದ್ದೆಲ್ಲಾ ಆಗಿಬಿಡುತ್ತದೆಯೇ? ಒಬ್ಬ ಮನುಷ್ಯ ದುಷ್ಟನಾಗಿರುವವನು ಏಕದಂ ಒಳ್ಳೆಯವನಾಗುತ್ತಾನೆಯೇ? ಮಗು ಹುಟ್ಟಿ 10-12 ವರ್ಷವಾದ ಮೇಲೆ ತಾನೆ ಅದಕ್ಕೆ ಓದುವ ಶಕ್ತಿ ಬರುವುದು? ಅದೇ ಪ್ರಕಾರ ಸರ್ಕಾರದವರೂ, ಸಾರ್ವಜನಿಕರೂ ಸೇರಿಕೊಂಡು ಪ್ರಚಾರ, ಬುದ್ಧಿವಾದ, ಹೆದರಿಕೆದಂಡ ಎಲ್ಲವನ್ನೂ ಮಾಡಿ ಪ್ರಯತ್ನ ಮಾಡಬೇಕು. ಅಲ್ಲದೆ ಕುಡಿಯುವ ಅಭ್ಯಾಸವಿರುವವನೂ ಕೂಡ ಎಷ್ಟು ದಿನಗಳವರೆಗೆ ಕುಡಿದಾನು?

ಹೀಗೆ ಕುಡಿತದ ಅಭ್ಯಾಸಕ್ಕೆ ಬಿದ್ದಿರುವುದರಲ್ಲಿ ಮುದುಕರು, ಹುಡುಗರು, ಹೆಂಗಸರು, ಗಂಡಸರು ಹೀಗೆ ನಾನಾ ರೀತಿ ಇದೆ. ಆದರೆ ಯಾರೂ ಸಣ್ಣ ಮಕ್ಕಳನ್ನು ಕಳ್ಳ ಭಟ್ಟಿ ಸಾರಾಯಿ ಕುಡಿಯಲು ಕರೆದುಕೊಂಡು ಹೋಗುವುದಿಲ್ಲ. ಆ ವಿವರಗಳೆಲ್ಲ ಆಯಾಯ ಡ್ರಾಂ ಹಾಕುವವರ ನೀತಿಗೆ ಅನುಸರಿಸಿ ಹೋಗುತ್ತದೆ. ಹೀಗೆ ನಮಗೆ ಈಗ ಉಂಟಾಗಿರುವ ಹಣಕಾಸಿನ ತೊಂದರೆಯಲ್ಲಿ ಸರ್ಕಾರದವರು ನಿಧಾನದಿಂದ ಮುಂದುವರಿಯಬೇಕೆಂದು ಹಾಕಿಕೊಂಡಿರುವ ನೀತಿಯನ್ನು ನಾನು ಒಪ್ಪುತ್ತೇನೆ. ಅಷ್ಟೇ ಅಲ್ಲದೆ, ಇದರಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿರುವ ಬಗ್ಗೆ ಎರಡು ಲಕ್ಷವಲ್ಲದೆ ನಾಲ್ಕು ಲಕ್ಷ ಹೆಚ್ಚಾಗಿ ಖರ್ಚಾದರೂ ಅದಕ್ಕೆ ಚಿಂತಿಸಬೇಕಾಗಿಲ್ಲವೆಂದೂ ನಾನು ಸೂಚಿಸುತ್ತೇನೆ. ಇದಕ್ಕೆ ನನ್ನ ಒಪ್ಪಿಗೆಯಿದೆ. ನಾವು ಈಗ ಈ ಪಾಲಿಸಿಯನ್ನು ಎಲ್ಲೆಲ್ಲಿ ಪ್ರಾರಂಭವಾಡಿದ್ದೇವೋ, ಅಲ್ಲೆಲ್ಲಾ ಇದು ಯಶಸ್ವಿಯಾಗತಕ್ಕ ಬಗ್ಗೆ ಹೆಚ್ಚು ಖರ್ಚು ಮಾಡತಕ್ಕದ್ದು ಮುಖ್ಯವಾದ ವಿಚಾರ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಬೇಕೆಂಬುದಾಗಿ ಈ ಸದರ್ಭದಲ್ಲಿ ಅವರನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ಯಾಮಿ, ಪಾನ ನಿರೋಧದ ಬಗ್ಗೆ ಪ್ರಸ್ತಾಪಮಾಡುತ್ತ ಮಾನ್ಯ ಮಿತ್ರರಾದ ಜನಾಬ್ ಇಮಾಂರವರು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ದೇಶಕ್ಕೆ ಬರುತ್ತಿದ್ದ ಉತ್ಪತ್ತಿ ಕಡಿಮೆ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ಪ್ರಾಹಿಬಿಷನ್ ಸಮಿತಿಯ ವರದಿಯನ್ನು ಸರ್ಕಾರದವರು ಅಂಗೀಕರಿಸಿದ್ದಿದ್ದರೆ ಸರ್ಕಾರಕ್ಕೆ ಬರುತ್ತಿದ್ದ ಆದಾಯದಲ್ಲಿ ಅರ್ಧಭಾಗಕ್ಕೆ ಹೆಚ್ಚಾಗಿ ಉತ್ಪತ್ತಿಯೆಲ್ಲ ಎಕ್ಸೈಜ್ ಕಂಟ್ರಾಕ್ಟರಿಗೇ ಹೋಗುತ್ತಿತ್ತು; ಅಂಥಾದ್ದರಲ್ಲಾ ಈಗ ತಪ್ಪಿಹೋಗಿ ಆ ದುಡ್ಡೆಲ್ಲಾ ಈಗ ಸರ್ಕಾರದ ಬೊಕ್ಕಸಕ್ಕೇ ಬರುತ್ತಿದೆಯೆಂಬ ಅಂಶವನ್ನು ನಾನು ನನ್ನ ಮಾನ್ಯ ಮಿತ್ರರಿಗೆ ತಿಳಿಸಬೇಕಾಗಿದೆ.

ಶ್ರೀ ಸಿದ್ದಪ್ಪನವರು ಒಂದು ವಿಚಾರ ತಿಳಿಸಿದರು. ಈಗ ಹಳ್ಳಿಗಳ ಕಡೆ ಮೊದಲಿಗಿಂತಲೂ ಕುಡುಕರ ಸಂಖ್ಯೆ ಹೆಚ್ಚಾಗಿ ಹೋಗಿದೆ ಎಂಬುದಾಗಿ. ಇದು ಸರಿಯಾದ ವಾದವಲ್ಲ. ಪಾನ ನಿರೋಧ ಜಾರಿಯಲ್ಲಿದ್ದ ಕಾಲದಲ್ಲಿ ವಿಷ್ಟೇ ಅಧಿಕ ಸಂಖ್ಯೆಯಲ್ಲಿದ್ದರೂ, ಅದು ಆಗ ಜನರ ಗೋಚರಕ್ಕೆ ಬರುತ್ತಿರಲಿಲ್ಲ. ಆದರೆ ಈಗ ಪಾನನಿರೋಧ ಜಾರಿಯಲ್ಲಿರುವುದರಿಂದ ಏನೊಂದು ಸಣ್ಣ ಪ್ರಮಾಣದಲ್ಲಿ ಆ ಕುಡಿಯತಕ್ಕವರ ಸಂಖ್ಯೆಇದ್ದರೂ ಅದೇ ಒಂದು ದೊಡ್ಡದಾಗಿ ಕಾಣುತ್ತಿದೆ. ಇದೂ ಅಲ್ಲದೆ ಈಗ ಈ ಪಾನನಿರೋಧ ಜಾರಿಲಿರುವುದರಿಂದ ಕುಡಿಯುವವರೂ ಸಹ ಧೈರ್ಯವಾಗಿ ಆ ಕೆಲಸ ಮಾಡುತ್ತಾರೆ. ಅವರು ಎಲ್ಲಿಯೋ ಮೂಲೆಯಲ್ಲಿ ಕುಳಿತು ಕುಡಿದುಬಿಟ್ಟು ಹೋಗುವುದರಿಂದ ಅವರು ಜನರ ಗೋಚರಕ್ಕೆ ಬೀಳುವುದೂ ಕೂಡ ದುರ್ಲಭ. ಅಂದ ಮೇಲೆ ಈಗ ಕುಡಿಯತಕ್ಕವರ ಸಂಖ್ಯೆ ಹೆಚ್ಚಾಗಿರುತ್ತೆಂಬುದನ್ನು ನಾನು ನಂಬಲಾರೆ. ಕುಡಿಯುವರು ಕೇವಲ ದೊಡ್ಡ ದೊಡ್ಡ ಟೌನ್ ಪ್ರದೇಶದಲ್ಲಲ್ಲದಿರಬಹುದೇ ಹೊರತು ಹಳ್ಳಿಗಳಲ್ಲಿ ತುಂಬಾ ಕಡಿಮೆಯಾಗಿದೆ. ಶ್ರೀ ಎಲ್. ಸಿದ್ದಪ್ಪನವರಿಗೆ ಹಳ್ಳಿ ಸಂಪ್ರದಾಯ ಗೊತ್ತಿರಬಹುದು. ಆದರೆ ನಾನೂ ಕೂಡ ಹಳ್ಳಿಯಲ್ಲೇ ಹುಟ್ಟಿದವನು. ಒಂದು ವಾರಕ್ಕೆ ಕನಿಷ್ಟಪಕ್ಷ ಎರಡಾವರ್ತಿಯಾದರೂ ಈಗಲೂ ನಮ್ಮ ಹಳ್ಳಿಗೆ ಹೋಗಿ ಬರುತ್ತಿದ್ದೇನೆ. ಹಳ್ಳಿಯವರ ಸಮಾಚಾರ ನನಗೆ ಗೊತ್ತಿದೆ. ಶಿವಮೊಗ್ಗ ಟೌನ್‌ನಲ್ಲಿ ಈ ಕುಡಿತ ಇರುವುದು ನನಗೆ ಕಂಡು ಬ್ಲುದ್ಧಿದೆಯೇ ಶಿವಾಯ ಹಳ್ಳಿಗಳಲ್ಲಿ ಅಷ್ಟಾಗಿ ಇರುವುದಿಲ್ಲ. ಶ್ರೀ ಭೀಮಪ್ಪನಾಯಕರು ಹೇಳಿದಂತೆ ಹಣವಂತರೂ ಮತ್ತು ಮಧ್ಯಮ ತರಗತಿಯವರೂ ಈ ಕುಡಿತವನ್ನು ಇನ್ನೂ ಕೈಬಿಟ್ಟಿಲ್ಲ. ಈ ಬಗ್ಗೆ ಇರಾಖಾ ಮಾನ್ಯ ಮಂತ್ರಿಗಳು ಬಹಳ ಶ್ರಮವಹಿಸಿ ಕೆಲಸ ಮಾಡಿದ್ದಾರೆ. ಆದ್ಯಾರಿ ಇರಾಖೆಯ ನೌಕರರು ಚೆನ್ನಾಗಿ ಶ್ರಮವಹಿಸಿ ಕೆಲಸ ಮಾಡುತ್ತಿಲ್ಲವೆಂಬ ಅಂಶವನ್ನು ಮಾನ್ಯ ಮಂತ್ರಿಗಳು ಗಮನಿಸಿದುದರಿಂದಲೇ ಈ ಬಾಬಿಗೆ ಪೋಲೀಸಿನವರ ಉಸ್ತುವಾರಿ ಅಗತ್ಯವೆಂದು ಭಾವಿಸಿದರು. ಹೀಗೆ ಇದರ ಅಕ್ರಮ ತಯಾರಿಕೆ ಮತ್ತು ಕುಡಿಯತಕ್ಕವರ ಸಂಖ್ಯೆ

ಗ್ರಾಮಾಂತರ ಪ್ರದೇಶಗಳಲ್ಲಿ ತಗ್ಗಿರುವುದು ಈ ಪೋಲೀಸ್ ಸಿಬ್ಬಂದಿಯ ಬಲದಿಂದಲೇ ಎಂಬುದು ಎದ್ದು ಕಾಣುತ್ತಿದೆ.

ಇನ್ನು ಸರ್ಕಾರದ ಪಾಲಸಿ ವಿಚಾರವಾಗಿ ಮಾತನಾಡುತ್ತ ಅವರು ತಮ್ಮ ಪಾಲಸಿಯನ್ನು ಬದಲಾಯಿಸಬೇಕೆಂದು ಕೆಲವರು ತಿಳಿಸಿದರು. ಆದರೆ ನಾನೂ ಸಹ ಪ್ರಥಮದಲ್ಲಿ ಹೆಂಡ ಒಂದಕ್ಕೆ ಸ್ವಲ್ಪ ಏನಾಯಿತ ಕೊಡಬಹುದೆಂದು ವಾದಿಸಿದ್ದೆ. ಆದರೆ ಇದೆರ್ಲಾ ಬಹಳ ಚರ್ಚಾಸ್ಪದವಾದ ವಿಚಾರ. ನಾನು ಹಾಗೆ ವಾದಿಸಿದ್ದ ಅಂಶ ಅದರಿಂದ ಹರಿಜನರಿಗೆ ಅನುಕೂಲವಾಗುತ್ತದೆಂಬ ಉದ್ದೇಶದಿಂದ ಹಾಗೆ ಹೇಳಿದ್ದೆ. ಆದರೆ ಈಗ ಆ ಅಭಿಪ್ರಾಯ ಕೂಡ ಸರಿಯಾಗಿರಲಿಲ್ಲವೆಂದು ನನಗೆ ಈಗ ತೋರುತ್ತಿದೆ. ಕಾರಣವೇನೆಂದರೆ ಈ ಪಾನನಿರೋಧ ಜಾರಿಯಲ್ಲಿಲ್ಲದಿದ್ದಾಗ ನಮ್ಮ ಮನೆ ಹತ್ತಿರ ಇದ್ದ ಹರಿಜನರ ಕೇರಿಗೆ ಎರಡು ದಿನಕ್ಕೊಮ್ಮೆ ಅವರ ವ್ಯಾಜ್ಯ ತೀರಿಸಲು ಹೋಗಬೇಕಾಗಿತ್ತು. ಆದರೆ ಈಗ ಅಂಥಾ ಪರಿಸ್ಥಿತಿಯೇನೂ ಇಲ್ಲ. ತಿಂಗಳಾದರೂ ಈಗ ವ್ಯಾಜ್ಯದ ಮಾತೇ ಇರುವುದಿಲ್ಲ. ಇಂಥಾ ಸುಧಾರಣೆ ಈಗ ಎಲ್ಲೆಲ್ಲಿಯೂ ಕಂಡುಬರುತ್ತಿದೆ. ಪಾನನಿರೋಧದ ಪರಿಣಾಮವನ್ನು ಇನ್ನೂ ಸ್ವಲ್ಪ ಕಾಲ ಕಾದು ನೋಡಬೇಕಾಗಿದೆ. ಆದುದರಿಂದ ನಾನು ಈ ಕತ್ತರಿ ನಿರ್ಣಯವನ್ನು ವಿರೋಧಿಸುತ್ತೇನೆ.

(Janab Syed Abdur Rahman rose to speak.)

The Hon'ble Sri K. CHENGALARAYA REDDY.—I think that Hon'ble Members may be aware that at 6 o'clock the guillotine will have to be applied and all the Demands passed.

Sri H. B. GUNDAPPA GOWDA.—The Treasury Benches must make use of some other method of cutting short the discussion.

The Hon'ble Sri T. MARIAPPA.—Hon'ble Members must co-operate with the Government.

***Janab SYED ABDUR RAHMAN** (Chikmagalur *cum* Shimoga—Muslim).—Sir, the demand that is required to meet the additional expenditure that has been incurred or that may be incurred to pay the additional staff that has been employed for the purpose of carrying effectively the Prohibition programme in the Mysore State, it appears to me, is quite a legitimate one. This House having accepted as a matter of policy that prohibition should be introduced in the Mysore State. In pursuance of that decision that was taken by this House or by the previous Legislature, the Government are bound to carry out that policy of prohibition. It is in that connection this expenditure is being incurred. There can be no two opinions with regard to the fact that when the Prohibition policy is being pursued effectively and Prohibition has been introduced in five districts in the State, the additional staff that will have to be employed, has already been employed. It has been made clear in the Explanatory Note that the Government have given sanction for it, but could not provide for it in the last Budget Session of the Legislative Assembly. So this demand comes before this House now for consideration. The demand is to the extent of Rs. 4 lakhs and odd. I think since the Government are committed to that position, this expenditure will have to be borne, however hard the Government might feel on account of it. The Hon'ble Chief Minister was just now telling us that they will be considering before the next Budget Session whether they will be in a position to pursue this policy of prohibition any further. We know that when the Madras Government took active steps in connection with the introduction of prohibition to all the districts in the Madras Presidency, there was even a direction from the Central Government to go slow in the matter. The Government of Mysore in pursuance of the decision already taken by them with regard to this matter did introduce prohibition in five districts. It has been pointed out to us by some of our Hon'ble Members who spoke on this cut motion that in spite of the fact that prohibition has been introduced in the State there are people who are given to this kind of habit and they have not been able to get over it. It is an evil no doubt. It will take its own time to be completely eradicated; but that does not mean necessarily that this Government which is committed to this policy of prohibition, should not take further effective steps to meet that situation. So long as the policy is there and so long as they are committed to that position, they are bound to carry it out whatever the expenditure. It is an irony of fate that this Excise Department which was formerly a source of large income to the Government is

* Speech not revised by the Member concerned.

(JANAB ABDUR RAHMAN.)

to day a department on which money has got to be spent by the Government. They have got to spend money if that evil is to be stopped. It therefore logically follows that whatever civil staff is employed for this purpose has got to be paid for. Formerly, the staff was in the hands of the Excise Department, and those officers were doing the whole job. Since it was found difficult from administrative point of view, the whole thing has been transferred to the Police Department. According to the figures quoted by the Hon'ble Minister for Excise there has been a lot of detection—about six thousand cases—and for all this money has got to be spent. My point is, so long as we have accepted this policy, we have got to meet this expenditure. With these few words I support the cut motion.

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ಶ್ರೀ ಎ. ಭೀಮಪ್ಪನಾಯಕರು ಮತ್ತು ಶ್ರೀ ಹನುಮಯ್ಯನವರು ಈ ವಿಷಯವನ್ನು ಚೆನ್ನಾಗಿ ಸಭೆಗೆ ಮನದಟ್ಟಾಗುವ ರೀತಿಯಲ್ಲಿ ವಿವರಿಸಿದ್ದಾರೆ. ಶ್ರೀ ಹನುಮಯ್ಯನವರ ಮಾತನ್ನು ನಾವು ನಂಬಬೇ ೨. ಯಾರು ಈ ಒಂದು ವ್ಯವಹಾರದಿಂದ ಕಂಗೆಟ್ಟಿದ್ದರೋ, ಯಾರು ಲಕ್ಷಾಂತರ ರೂಪಾಯಿಗಳನ್ನು ವರ್ಷೇ ವರ್ಷೇ ಕಳೆದುಕೊಳ್ಳುತ್ತಿದ್ದರೋ ಅವರಿಗೆ ಅನುಕೂಲವಾಗಿದೆಯೆನ್ನುವುದರಲ್ಲಿ ಏನೂ ಸಂಶಯವಿಲ್ಲ. ಅಲ್ಲೊಂದು ಕಡೆ ಇಲ್ಲೊಂದುಕಡೆ ಕಳ್ಳಬಟ್ಟಿ ಇಳಿಸಿ ಕದ್ದು ತೆಗೆದುಕೊಂಡು ಬಂದು ಕುಡಿಯುತ್ತಾರೆಂದು ಉದಾಹರಣೆ ಹೇಳಿ, ಇದರಿಂದ ಏನೂ ಪ್ರಯೋಜವಾಗಿಲ್ಲ ಎಂದು ಹೇಳಿದರೆ ನಾವು ಕಣ್ಣು ಮುಚ್ಚಿ ಕುಳಿತಿದ್ದೇವೆಯೇ ಎಂದು ಆಶ್ಚರ್ಯವಾಗುತ್ತದೆ. ಜನಾಬ್ ಇಮಾಂರವರೇ ಪಾನನಿರೋಧ ಸಮಿತಿಯ ಅಧ್ಯಕ್ಷರಾಗಿದ್ದರು. 1946ರಲ್ಲೇ ಈ ನೀತಿಯನ್ನು ಒಪ್ಪಿಕೊಂಡು ಈಗ ವಿರೋಧಿಸುವುದು ಆಶ್ಚರ್ಯವಾಗಿದೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಈ ನೀತಿಯನ್ನು ನಾವು ಒಪ್ಪಿಕೊಂಡಿಲ್ಲ. It is wrong.

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಪಾನನಿರೋಧವನ್ನು ಮೈಸೂರು ದೇಶದಲ್ಲಿ ಜಾರಿಗೆ ತರಬೇಕಾದ್ದು ಅಗತ್ಯ, 5 ವರ್ಷಗಳಲ್ಲಿ ತರಬೇಕೆಂದು ಒಪ್ಪಿಕೊಂಡಿದ್ದಾರೆ. ಬಾಕಿಯಾದ್ದೆರಲ್ಲಿ ಭಿನ್ನಾಭಿಪ್ರಾಯ ವಿದೆಯೆಂದು ಹೇಳಬಹುದು. ಆದರೆ ಬಹಳ ವರ್ಷದಿಂದ ನಡೆದುಕೊಂಡು ಬಂದಿರುವುದನ್ನು ಬಹಳ ಬೇಗ ಸುಧಾರಿಸುವುದು ಕಷ್ಟ, ಈ ಕಷ್ಟನಷ್ಟವನ್ನು ದೇಶದ ಹಿತದೃಷ್ಟಿಯಿಂದ ಎದುರಿಸಬೇಕು, ಒಂದೊಂದು ಡಿಸ್ಟ್ರಿಕ್ಟಿಗೆ ಒಂದೊಂದು ಲಕ್ಷದಂತೆಯಾದರೂ ಕೊಟ್ಟು ಜಾರಿಗೆ ಕೊಡಬೇಕು ಎಂದು ಹೇಳಿದ್ದಾರೆ, ಬೇಕಾದರೆ ಓದುತ್ತೇನೆ. ಈಗ 5 ಜಿಲ್ಲೆಗಳಿಗಾಗಿ 4 ಲಕ್ಷ 28 ಸಾವಿರ ರೂಪಾಯಿಗಳನ್ನು ಮಾತ್ರ ಕೇಳುತ್ತಿದೆ. ಜನಾಬ್ ಇಮಾಂರವರು ಅಧ್ಯಕ್ಷರಾಗಿದ್ದ ಒಂದು ಸಮಿತಿಯವರು ಹೀಗೆ ಹೇಳಿದ್ದಾರೆ:—

"The Committee feel that if an average of 1 lakh of rupees for each District or on the whole a sum of 10 lakhs for the whole State is provided the requirement of enforcement could be adequately met when prohibition comes into full adoption."

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಅವರು ರುಜು ಮಾಡಿದ್ದಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡಿದ್ದಾರೆ. ಶ್ರೀ ಎರ್. ಸಿದ್ದಪ್ಪನವರು ಮಂತ್ರಿಗಳಾಗಿದ್ದಾಗ ಇದ್ದ ಸರ್ಕಾರದವರು ಅದನ್ನು ಅಂಗೀಕಾರ ಮಾಡಿದ್ದಾರೆ. ದಿನಬೆಳಗಾದರೆ ನಾವು ತತ್ವವನ್ನು ಬದಲಾಯಿಸಬಾರದು, ಅದೇ ತತ್ವವನ್ನು ನಿರ್ದಿಷ್ಟಕಾಲದವರೆಗಾದರೂ ಅನುಸರಿಸಬೇಕು. ಜನಾಬ್ ಸೈಯದ್ ಅಬ್ದುರ್ ರಹಮಾರ್ವರವರು ಹೇಳಿದುದು ಉತ್ತಮವಾದ ಸಲಹೆ. ಅದರ ಜೊತೆಯಲ್ಲಿ ಕಾಂಪ್ರೊಮೈಸ್ ಮಾಡಿಕೊಳ್ಳುವುದು ಬೇಡ. ಇದರಿಂದ ನಮ್ಮ ಸಂಸ್ಕೃತಿಯು ಕೆಡುತ್ತದೆಂದು ಹೇಳಬೇಕಾದ್ದಿಲ್ಲ. ಕದ್ದು ಕುಡಿಯುತ್ತಾರೆ, ಬಹಿರಂಗವಾಗಿ ಕುಡಿಯುವವರು ಮತ್ತು ಪಾರ್ಟಿಗಳಲ್ಲಿ ಕುಡಿಯುವವರು ಹೆಚ್ಚಾಗಿಲ್ಲ; ಯಾರು ದೇಶಕ್ಕಾಗಿ ಶ್ರಮಿಸುವುದಕ್ಕೆ ತಯಾರಾಗಿದ್ದಾರೋ, ಯಾರಿಂದ ಐಶ್ವರ್ಯ ಉತ್ಪತ್ತಿಯಾಗುತ್ತದೆಯೋ ಅಂಥ ಮಹನೀಯರು ಉದ್ಧಾರವಾದರೂ ಸಾಕು. ಶ್ರೀ ಭೀಮಪ್ಪನಾಯಕರು ಹೇಳಿದಂತೆ ಕದ್ದು ಹೆಚ್ಚು ಹಣ ಕೊಟ್ಟು ಕುಡಿಯುವವರು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ, ಅವರೆಲ್ಲಾ ಸಮಾಜ ಕಂಟಕರೆಂದೇ ಹೇಳಬೇಕು. ಶ್ರೀ ಹನುಮಯ್ಯನವರು ಹೇಳಿದಹಾಗೆ ಅನೇಕ ಹರಿಜನರಿಗೆ ಇದು ಸಹಾಯ ಮಾಡಿದೆ. ಉದಾಹರಣೆಗೆ ಮಂಡ್ಯ ಜಿಲ್ಲೆಯಲ್ಲಿ ಪಾನನಿರೋಧ ಜಾರಿಗೆ ಬಾರದೇ ಇದ್ದರೂ ಕೆಲವು ಹಳ್ಳಿಗಳಲ್ಲಿ ಹರಿಜನರು ಪ್ರಮಾಣಮಾಡಿ ಕುಡಿತವನ್ನು ಬಿಟ್ಟಿದ್ದಾರೆ. ಶ್ರೀ ಹನುಮಯ್ಯನವರಿಗೆ ಸಂಬಂಧಪಟ್ಟಿರುವ ತುಮಕೂರು ಮತ್ತು ಚಿತ್ರದುರ್ಗದಕಡೆ ಅನೇಕರು ಕುಡಿತವನ್ನು ಬಿಟ್ಟಿದ್ದಾರೆ. ಈಗಲೂ ಇದನ್ನು ಜನಾಬ್ ಇಮಾಂರವರು ಬೆಳ್ಳೂರಿಗೆ ಹೋಗಿ ನೋಡಬಹುದು. ಅಲ್ಲಿ ನಿರೋಧವು ಜಾರಿಯಲ್ಲಿಲ್ಲ, ಆದರೂ ಕೂಡ ಹರಿಜನರು ಒಂದು ಕಟ್ಟುಪಾಡಿಕೊಂಡು ಕುಡಿಯುವುದನ್ನು ಬಿಟ್ಟಿದ್ದಾರೆ. ಅಲ್ಲಿ ಅವರ ಪೈಕಿ ಯಾರಾದರೂ ಕುಡಿದರೆ ಬಲಹಾಕುತ್ತೇವೆಂದು ಕಟ್ಟುಮಾಡಿದ್ದಾರೆ. ಇದು ಒಳ್ಳೆಯದೆಂದೂ, ಜಾರಿಗೆ ಕೊಡ್ತೇಕೊಡಬೇಕೆಂದೂ ಹೇಳಿದರೆ ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಸದಸ್ಯರು ಸಲಹೆಗಳನ್ನು ಅನೇಕವಾಗಿ ಕೊಟ್ಟಿದ್ದಾರೆ. Prohibition as a whole ಜಾರಿಗೆ ಬರಬೇಕೆಂಬುದು ನಿಜ. ಶ್ರೀ ಗುಂಡಪ್ಪಗೌಡರು ಹೇಳಿದಹಾಗೆ ಆತುರದಲ್ಲಿ ಕೆಲಸ ಯಾರು ಮಾಡಿದರು ? ಹಾಗೆ ಮಾಡಲಲ್ಲ. ಈ ವಿಚಾರವನ್ನು ಪರಿಶೋಧನೆ ಮಾಡಿರುವ ಸಮಿತಿಯ ವರದಿ ನಮಗೆ ಬಂದಿದೆ, ತಾತ್ಕಾಲಿಕವಾಗಿ ಇದರಿಂದ ಸಂಪೂರ್ಣ ಫಲ ದೊರೆಯದೇ ಇರಬಹುದು. ಏಕೆಂದರೆ ಅನೇಕ ವರ್ಷಗಳು ಕುಡಿದಿರುವವರು ಅದನ್ನು ಮರೆತು ಬಿಡುವುದು, ಬೇಗ ತಿಳಿವಳಿಕೆಯನ್ನು ಪಡೆಯುವುದು ಬಹು ಕಷ್ಟ. ಆದರೆ ಈ ಕಷ್ಟನಷ್ಟವನ್ನು ಎದುರಿಸಬೇಕು. 1948-49ರಿಂದ ಪಾನ ನಿರೋಧವನ್ನು ಜಾರಿಮಾಡಿ ಮೂರು ವರ್ಷವಾಗಿರುವಾಗಲೇ ಎಲ್ಲರೂ ಸಜ್ಜನರಾಗುವುದು ಕಷ್ಟ. ಯಾರು ಕುಡಿಯುತ್ತಿದ್ದಾರೊ ಅವರು ಸಾಯುವವರೆಗೆ ಕುಡಿಯಲಿ ಎಂದು

ಬಡೋಣ, ಆದರೆ ಮುಂದಿನ ಜನಾಂಗ ಮತ್ತು ಹೆಂಗಸರು ಸಂಖ್ಯೆಪಡುತ್ತಾರೆ. ಹಳ್ಳಿಗಾಡಿನಲ್ಲಿ ಹೋಗಿ ನೋಡಿದರೆ ಹರಿಜನರಿರುವ ಎಲ್ಲಾ ಹಳ್ಳಿಗಳಲ್ಲೂ ಪರಿಸ್ಥಿತಿ ಉತ್ತಮವಾಗಿದೆ. ಕೆಲವುಕಡೆ ಶ್ರೀ ಭೀಮಪ್ಪನಾಯಕರು ಹೇಳಿದಹಾಗೆ ಕೆಲವು ತಾಂಡಾದಲ್ಲಿ ನಡೆಯುತ್ತಿದೆ, ಹಾಗಿದ್ದಮಾತ್ರಕ್ಕೇ ಅದು ಇರಬೇಕು, ಅಂಥವರಿಗೆ ಸಹಾಯವಾಗಲಿ ಎಂದು ಹೇಳಬಾರದು. ಪೋಲೀಸಿನವರು ಕೆಲವುಕಡೆ ಹಿಡಿದಿದ್ದಾರೆ. ಶ್ರೀ ಸಿದ್ದಪ್ಪನವರು ಪೋಲೀಸಿನವರು ಸರಿಯಾಗಿ ಕೆಲಸ ಮಾಡಿಲ್ಲ ಎಂದು ಹೇಳಿದರು. ಮೈಸೂರು ದೇಶದಲ್ಲಿ ಪ್ರಾಯಶಃ ಅವರು ಹುಟ್ಟಿದಲಾಗಾಯ್ತು, ಡಕಾಯ್ತಿ, ಕಳ್ಳತನ ಆಗುತ್ತಿದೆ. ಆದ್ದರಿಂದ ಪೋಲೀಸಿನವರನ್ನು ವಜಾಮಾಡಬೇಕೆ? ಜನರ ನೈತಿಕ ಮಟ್ಟದಂತೆ ಅದು ನಡೆಯುತ್ತಾ ಹೋಗುತ್ತದೆ. ಕೆಲವುಕಡೆ ಕುಡಿತವು ಒಂದು ಒಳ್ಳೆಯ ವಸ್ತುವೆಂದು ಗೌರವಿಸುತ್ತಾರೆ. ನಮ್ಮಲ್ಲಿ ಅದು ಕೆಟ್ಟ ದ್ದೆಂದು ನಾವು ಭಾವಿಸಿದ್ದೇವೆ. ಅದು ದೇಶಕ್ಕನು ಗುಣವಾಗಿದೆ. ಪಾಶ್ಚಾತ್ಯರು ಅದೊಂದು ಗೌರವಯುತವಾದುದೆಂದು ಹೇಳುತ್ತಾರೆ. ಅಲ್ಲಿ ಮಾನಸ್ತರು ಕಾಣುವ ಹಾಗೇ, ಕುಡಿಯುತ್ತಿದ್ದಾರೆ. ಅದೇ ಇಲ್ಲಿನ ರೀತಿ ಬೇರೆಯಾಗಿದೆ.

ಪಾರ್ಟಿಗಳಲ್ಲಿ ಕುಡಿಯುವವರು ಹೊರಗೆ ಬಂದು ನಾವು ಕುಡಿದೆವೆಂದು ಹೇಳಿಕೊಳ್ಳುವುದಿಲ್ಲ, I am not addicted to drink ಎಂದು ಹೇಳಿಕೊಳ್ಳುವ ಮಹನೀಯರೂ ಇದ್ದಾರೆ. ಏಕೆಂದರೆ ಇದರಲ್ಲಿ ಸಮಾಜದ ಒಂದು ಕಟ್ಟು ಕಟ್ಟಲೆಯ ಹೆದರಿಕೆಯಿದೆ, ಕುಡಿಯಬಾರದು, ಕುಡಿಯುವುದು ಅವಮಾನ ಎಂಬ ಭಾವನೆಯನ್ನು ನಮ್ಮ ಸಮಾಜದಲ್ಲಿ ಜಾರಿಗೆ ತಂದೇ ಹೋದರೆ ಇನ್ನು ಪ್ರಪಂಚದ ಯಾವ ಭಾಗದಲ್ಲಿಯೂ ಆಗುವುದಿಲ್ಲ. ಒಟ್ಟಿನಲ್ಲಿ ಇಷ್ಟು ಹೇಳಬಹುದು, ಇದಕ್ಕೆ ಕನಿಷ್ಟಪಕ್ಷ ಹತ್ತು ವರ್ಷ ಅವಧಿಯನ್ನು ಕೊಟ್ಟು, ಶ್ರೀಮಾನ್ ಗುಂಡಪ್ಪಗೌಡರು ಹೇಳಿದಹಾಗೆ ಸಂಪೂರ್ಣ ಪ್ರಚಾರ ಕಾರ್ಯವನ್ನು ಕೈಗೊಂಡು ಪ್ರಜಾಭಿಪ್ರಾಯದ ಒತ್ತಾಯವನ್ನು ಅವರಮೇರೆ ಹೇರಿ ಅವರೇ ಬಿಟ್ಟುಬಿಡುವಂತೆ ಮಾಡುವುದೇನೋ ಒಳ್ಳೆಯದೆ. ಆದರೆ ಇದು ಅಷ್ಟು ಸುಲಭವಲ್ಲ.

ಇನ್ನೊಂದು ವಿಚಾರ ಹೇಳಿದರು, ಕಾನೂನಿಗೆ ವಿರುದ್ಧವಾಗಿ ನಡೆದವರು ಯಾರೆಂಬುದನ್ನು ಸರ್ಕಾರಕ್ಕೆ ತಿಳಿಸಿದರೆ ಅಂಥವರನ್ನು ಹೊಡೆಯುತ್ತಾರೆಂದು ಹೇಳಿದರು, ನಿಜ. ಅಂತಹ ಸಮಾಜ ಘಾತುಕರಿದ್ದಾರೆ. ಕಳ್ಳಬಟ್ಟಿಯಿಂದ 15—16ರಷ್ಟು ನಷ್ಟ ಬರುತ್ತದೆಂದು ಹೇಳುತ್ತಾರೆ.

The Hon'bl Sri K. CHENGALARAYA REDDY.—It is worth while for them to do this.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರಿಂದ ಅವರು ಬೆಟ್ಟ, ಗುಡ್ಡ, ಕಾಡುಗಳಿಗೆ ಹೋಗಿ ಮಾಡುತ್ತಾರೆ, ಲಂಚ ಬೇಕಾದಷ್ಟು ಕೊಟ್ಟಾದರೂ ತಪ್ಪಿಸಿಕೊಳ್ಳಲು ತಯಾರಾಗಿರುತ್ತಾರೆ.

Janab J. MOHAMED IMAM.—I was not allowed to refer to these details.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಇಷ್ಟು ಕಷ್ಟಪಟ್ಟಾದರೂ ಮಾಡುವುದರಿಂದಲೇ ನಮಗೆ ವ್ಯಕ್ತವಾಗುತ್ತದೆ, ಇವರು ಹಣಕ್ಕಾಗಿ ಮಾಡುತ್ತಿದ್ದಾರೆಂದುದು. ಆದರೆ ಇಂತಹ ಸಂದರ್ಭಗಳು ಎಷ್ಟು? ಒಂದೆರಡು ಮಾತ್ರ. ಒಂದೆರಡಾದರೂ ಇಂಥ ವಿಷಯ ಪ್ರಚಾರವಾಗುವುದು ಹೆಚ್ಚು, ಪಾನನಿರೋಧವಿಲ್ಲದೇ ಯಿದ್ದಾಗ ಊರುಗಳಲ್ಲೇ ಈ ರೀತಿ ನಡೆದರೂ ಯಾರೂ ಮಾತನಾಡುತ್ತಿರಲಿಲ್ಲ! ಆದರೆ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಲ್ಲಿ ನಾನೊಂದು ಮನವಿಮಾಡಿಕೊಳ್ಳಬೇಕಾಗಿದೆ. ಪಾನನಿರೋಧ ಕಾರ್ಯ ಯಶಸ್ವಿಯಾಗಿ ನಡೆಯುತ್ತಿಲ್ಲವೆಂದು ನಾವೇ ಪ್ರಚಾರಮಾಡಿದರೆ ಅದರಿಂದ ದೇಶಕ್ಕೆ ಒಳ್ಳೆಯದಲ್ಲ. Let us not compromise with evil. ಪಾನನಿರೋಧ ಮುಂದುವರಿಯುವುದರಿಂದ ನಮಗೂ ದೇಶಕ್ಕೂ ಉತ್ತಮಾರ್ಥ ಪರಿಣಾಮವಾಗಬಹುದು. ಆದರೆ ಈಗ ಕೈಕೊಂಡಿರುವುದರಿಂದ ಒಳ್ಳೆಯ ಪರಿಣಾಮವಾಗಿಲ್ಲವೆಂದು ಹೇಳಿ ಈ ಕಾರ್ಯಕ್ರಮವನ್ನು ರದ್ದುಮಾಡಿ ಪುನಃ ಕುಡಿತಕ್ಕೆ ಅವಕಾಶ ಕೊಟ್ಟರೆ ಅವರಿಂದ ಅನೇಕ ಬಡ ಸಂಸಾರಗಳು ಕೆಟ್ಟುಹೋಗುತ್ತವೆ. ಶೇಕಡ 95 ರಷ್ಟು ಹರಿಜನರ ಸಂಸಾರಗಳಿಗೆ ತೊಂದರೆಯಾಗುತ್ತದೆ. ಈಗ ಅವರು ಕುಡಿತವನ್ನು ಬಿಟ್ಟಿದ್ದರಿಂದ ಆರೋಗ್ಯವಾಗಿದ್ದಾರೆ, ಸ್ವಲ್ಪ ಹಣ ಕಾಸನ್ನೂ ಮಾಡಿಕೊಂಡಿದ್ದಾರೆ, ಮನೆಮಠಗಳನ್ನೂ ಮಾಡಿಕೊಂಡಿದ್ದಾರೆ. ನಾನು ಕಡೂರು ಜಿಲ್ಲೆಗೆ ಹೋಗಿದ್ದೆ. ಅಲ್ಲ ಹರಿಜನರ ಕೇರಿಗೆ ಹೋಗಿ ನೋಡಿದೆ 60—70 ಮನೆಗಳಿದ್ದವು ಆ ಕೇರಿಯಲ್ಲಿ. ಪಾನನಿರೋಧ ಜಾರಿಗೆ ಬಂದದ್ದರಿಂದ ನಾವು ಮನೆಗಳನ್ನು ಕಟ್ಟಿಕೊಂಡು ಸುಖವಾಗಿದ್ದೇವೆಂದು ಅವರೇ ನನಗೆ ಹೇಳಿದರು.

Sri H. B. GUNDAPPA GOWDA.—I am glad The Hon'bl Chief Minister will take particular care of this statement.

The Hon'ble Sri K. CHENGALARAYA REDDY.—I know several cases like that, Sir, where people are more happy over the introduction of prohibition.

Sri L. SIDDAPPA.—Are you also aware of the other side of the picture as well?

The Hon'ble Sri T. MARIAPPA.—I am equally aware of it and it is most disconcerting to find that some influential people are behind it. But that should not deter us from pursuing a policy which is beneficial to the people and to the country at large (hear, hear!).

ಶ್ರೀಮಾನ್ ಗುಂಡಪ್ಪಗೌಡರು ಹೇಳಿದಹಾಗೆ ಅಲ್ಲಲ್ಲಿ ಸಂಘಗಳನ್ನು ಮಾಡಿಕೊಂಡು ಪ್ರಚಾರಮಾಡುತ್ತಿದ್ದಾರೆ. ಆದರೆ ಬರಿಯ ಪ್ರಚಾರ ಮಾಡಿದರೇ ಸಾಲದು. ಅವರೇ ಹೇಳಿದಂತೆ ಜನರಿಗೆ ಮನಸ್ಸು ಬಂದು ಕುಡಿಯುವವರನ್ನು ಊರಿಗೆ ಸೇರಿಸಬಾರದೆಂದು ಊರಿನವರೆಲ್ಲಾ ಸೇರಿ ಕುಡಿಯುವವರಮೇಲೆ ಕಟ್ಟು ಮಾಡಿದರೆ ಒಂದೆರಡು ವರ್ಷದಲ್ಲೇ ಇದು ಪೂರ್ಣವಾಗಿ ನಿಂತುಹೋಗುತ್ತದೆ. ಸಮಾಜದ ಒತ್ತಾಯಕ್ಕೆ ಜನ ಬಗ್ಗುವಹಾಗೆ ಪೋಲೀಸಿನವರಿಗೂ ಕಾನೂನುಗಳಿಗೂ ಬಗ್ಗುವಹಾಗಿಲ್ಲ. ಕಾನೂನಿನ ಪ್ರಕಾರ ಸಿಕ್ಕಿಕೊಂಡರೆ ಲಂಚವಾದರೂ ಕೊಟ್ಟು ತಪ್ಪಿಸಿಕೊಳ್ಳೋಣವೆಂದು ಯೋಚಿಸುತ್ತಾರೆ. ಕುಡಿಯುವವರನ್ನು ಸಮಾಜದಲ್ಲಿ ಕೂಡಬಾರದು, ಅಂಥವರು ಸಮಾಜದ ನಡುವೆ ಇರುವುದು ಒಳ್ಳೆಯದಲ್ಲವೆಂದರೆ ಆಗ ತಾವು ಸಮಾಜದಿಂದೇರೇ ಬೇರೆ ಇರಬೇಕಾಗುತ್ತದೆಂದು ಹೇಳಿದರೆ. ಬಹು ಬೇಗ ತಲೆ

(THE HON'BLE SRI T. MARIAPPA.)

ಬಾಗುತ್ತಾರೆ. ನನಗೇ ತಿಳಿದಿರುವಹಾಗೆ ಹಾಸನದ ಹತ್ತಿರ ಒಂದು ಕಡೆ ಕುಡಿಸುವರನ್ನು ಊರನ್ನೇ ಬಡಿಸಿದ ನಿದರ್ಶನವಿದೆ. ಆದುದರಿಂದ ಮಾನ್ಯ ಸದಸ್ಯರಾದ ತಾವೂ ನಾವೂ ಜನ ಳೂ ಎಚ್ಚರೂ ಸೇರಿಕೊಂಡು ಪಾನ ನಿರೋಧವನ್ನು ಯಶಸ್ವಿಯಾಗಿ ಮಾಡೋಣ. ಯಶಸ್ವಿ ಯಾಗಿಲ್ಲವೆಂದು ದೇಶವಲ್ಲ ಹರಡಬಾರದು. ಇದರಿಂದ ದುಷ್ಪರಿಣಾಮವಾಗುತ್ತದೆ. ನಿಜವಾಗಿಯೂ ಇದು ಏನೂ ಪರಿಣಾಮಕಾರಿಯಾಗಿಲ್ಲವೆಂದು ಕುಡಿಯುವು ದನ್ನು ಬಿಟ್ಟಿರುವವರೂ ಮತ್ತೆ ಕುಡಿಯುವುದಕ್ಕೆ ಪ್ರಾ ರಂಭವಾಗುತ್ತಾರೆ. ಈ ಸಂದರ್ಭದಲ್ಲಿ ಅನೇಕರು,ಮೊಡ್ಡ ವರು ಚೆನ್ನಾಗಿ ಹಣ ಮಾಡಿಕೊಂಡಿರುವ ಮಹನೀಯರೂ ಇದ್ದಾರೆ. ಅವರು ಸಮಾಜ ಘಾತಕರು. ಅಂಥವರನ್ನು ಹಿಡಿಯುವುದು ಕಷ್ಟವಾಗುತ್ತದೆ. ಹೀಗಿದ್ದರೂ ಕೂಡ ಸಾವಿರಾರು ಕೇಸುಗಳನ್ನು ಹಿಡಿದಿದ್ದಾರೆ.

ಪೋಲೀಸು ಇರಾಖೆಗೆ ವಹಿಸುವ ವಾರ್ಗ ಅಮೇಲೆ ಗೊತ್ತಾಯಿ ಎಂದು ಶ್ರೀಮಾನ್ ಗುಂಡಪ್ಪಗೌಡರು ಕೇಳಿದರು. . ಮದರಾಸು ಸರ್ಕಾರದವರು ಕೂಡ ಮೊದಲು ಈ ಕೆಲಸವನ್ನು ಅಬ್ಕಾರಿ ಇರಾಖೆಯ ಸಿಬ್ಬಂದಿಗೇ ಕೊಟ್ಟಿದ್ದರು, ಪೋಲೀಸ್ ಇರಾಖೆಗೆ/ಕೊಟ್ಟರಲ್ಲ. ಅವರು ಆ ಮೇಲೆ ಒಂದು ಸಮಿತಿಯನ್ನು ಮಾಡಿ ಆ ಸಮಿತಿಯವರು ಅಬ್ಕಾರಿ ಇರಾಖೆಗೆ ಈ ಕೆಲಸ ವಹಿಸುವುದು ಸೂಕ್ತವಲ್ಲ ಅವರು ಕಂಟ್ರಾಕ್ಟರುಗಳೊಡನೆ ಅನೇಕ ವರ್ಷಗಳು ಸಂಪರ್ಕವಿಟ್ಟುಕೊಂಡಿರುತ್ತಾರೆ, ಆದಕಾರಣ ಆ ಇರಾಖೆಯಿಂದ ತಪ್ಪಿಸುವುದೇ ಮೇಲೆಂದು ಸಲಹೆಮಾಡಿದಮೇಲೆ ಅದನ್ನು ಪೋಲೀಸ್ ಇರಾಖೆಗೆ ವಹಿಸಿದರು. ನಾವು ಆಮೇಲೆ ಸಮಿತಿಮಾಡಿದರೂ ಕೂಡ, ಇದನ್ನು ಜಾರಿಗೆ ಕೊಟ್ಟಿದ್ದು ನಾವೇ ಮೊದಲು. ನಾವು ಬಹಳ ಎಚ್ಚರಿಕೆಯಿಂದ ಪರಿಶೀಲಿಸಿ, ನಮ್ಮ ಅನುಭವದಿಂದಲೂ ಪರೀಕ್ಷಿಸಿ ನಾವು ಕೂಡ ಅದೇ ತೀರ್ಮಾನಕ್ಕೆ ಬಂದು ಪೋಲೀಸು ಇರಾಖೆಗೇ ವಹಿಸಬೇಕೆಂದು ತೀರ್ಮಾನಿಸಿ 1950 ನೆಯ ಇಸವಿ ಮಾರ್ಚ್ 31ನೆಯ ತಾರೀಖು ಸರ್ಕಾರಿ ಆಜ್ಞೆಮಾಡಿ ಅದನ್ನು ಜಾರಿಗೆ ತಂದೆವು. ಪೋಲೀಸಿನವರ ಕೈಲಿ ಈ ಕೆಲಸ ಆಗಲಲ್ಲವೆಂದು ಯಾರೂ ತಿಳಿಯಬಾರದು. ಅನೇಕ ಕೇಸುಗಳನ್ನು ಹಿಡಿದು ಕೋರ್ಟುಗಳಲ್ಲಿ ಮೊಖದ್ದಮೆಗಳನ್ನು ಹೂಡಿ ಸುಮಾರು 80 ಸಾವಿರ ರೂಪಾಯಿ ಜುರ್ಮಾನೆ ಹಾಕಿಸಿದ್ದಾರೆ. ಈ ಕೇಸುಗಳನ್ನು ಹಿಡಿಯುವುದು ಎಷ್ಟು ಕಷ್ಟವೆಂಬುದನ್ನು ನಭೆಗೆ ಹೇಳಿದರೆ, ಇಷ್ಟು ಕಷ್ಟದಿಂದೇಕೆ ಮಾಡಬೇಕು ಎನಿಸಬಹುದು!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಇನ್ನೂ ಉಗ್ರವಾದ ಶಿಕ್ಷೆ ವಿಧಿಸಬೇಕೆಂದು ಕಾಣುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಶಿಕ್ಷೆಯನ್ನು ಹೆಚ್ಚಿಸಬೇಕು. ಬೆಟ್ಟ ಗುಡ್ಡಗಳಿಗೆ ಹೋಗಿ ಅಲ್ಲೆ ಮಾಡುತ್ತಾರೆ, ಗುಂಪು ಕಟ್ಟಿಕೊಂಡಿರುತ್ತಾರೆ. ಚಿತ್ರದುರ್ಗ ಜಿಲ್ಲೆಯಲ್ಲ ಪೋಲೀಸಿನವರನ್ನೇ ಹೊಡೆದಿದ್ದಾರೆ. ಪುನಃ ಪೋಲೀಸಿನವರನ್ನು ಕರೆದುಕೊಂಡು ಹೋಗಿ ಅವರನ್ನು ಹಿಡಿಬೇಕಾಯಿತು. ಯಾವಾಗ ಪೋಲಗಳೂ ಪುಂಡರೂ ಸೇರಿಕೊಂಡು ಈ ದುಷ್ಕಾರ್ಯ ಮಾಡುತ್ತಾರೋ ಅವರು ಜೋರಾಗಿಯೇ ಇರುತ್ತಾರೆ. ಹಿಡಿಯಲು ಬಂದರೆ ಹೊಡೆಯಬೇಕೆಂಬ ಮನೋಭಾವ ವಿದ್ದೇ ಇರುತ್ತದೆ. ಆದಕಾರಣ ಈ ಕೆಲಸಕ್ಕೆ ಹೆಚ್ಚು ಮಂದಿ ಪೋಲೀಸಿನವರನ್ನು ಹಾಕಬೇಕು ಪರಿಣಾಮ ಕಾರಿಯಾಗಿ ಈ ಕೆಲಸ ನಡೆಯಲೆಂಬ ಉದ್ದೇಶದಿಂದಲೇ 324 ಜನ ಕಾನ್ಸ್ಟೇಬಲ್‌ಗಳು, 52 ಜನ ದಫೇದಾರರು ಮತ್ತು 10 ಜನ ಸಬ್‌ಇನ್ಸ್ಪೆಕ್ಟರುಗಳನ್ನೂ ನೇಮಿಸ ಬೇಕಾಯಿತು. ಈ ಬಗ್ಗೆ ಸರ್ಕಾರಿ ಆಜ್ಞೆಯಾಗಲು ತಡವಾದುದರಿಂದ ಹೋದ ಬಜೆಟ್ಟಿನಲ್ಲಿ ಸೇರಿಸಲು ಸಾಧ್ಯವಾಗಲಲ್ಲ. ಇಲ್ಲಿ ಖರ್ಚು ಹೆಚ್ಚಾದರೂ ಎಕ್ಸ್ಟ್ರಾಜು ಬಾಬಿನಲ್ಲಿ ಹಣ ಉಳಿತಾಯವಾಗಿದೆಯೆಂದು ಆಗಲೇ ಸಚಿವರು ಹೇಳಿದ್ದಾರೆ. ಈ ಕಾರಣಗಳಿಂದ ಈ ಡಿಮ್ಯಾಂಡನ್ನು ಒಪ್ಪಿಕೊಳ್ಳಬೇಕೆಂದೂ ಜನಾಬ್ ಇಮಾಂ ರವರು ಈ ಖೋತಾ ಸೂಚನೆಯನ್ನು ವಾಪಸು ತೆಗೆದು ಕೊಳ್ಳಬೇಕೆಂದೂ ಕೇಳಿಕೊಳ್ಳುತ್ತೇನೆ.

Janab J. MOHAMED IMAM.—I press the cut motion, Sir.

Mr. SPEAKER.—The question is:

"That the demand under the head '20 Police' be reduced by Rs 100".

The motion was negatived.

Janab J. MOHAMED IMAM.—I do not move the next cut motion.

Mr. SPEAKER.—I will now put the Demand. The question is:

"That a supplementary sum not exceeding Rs. 7,55,500 be granted to the Government to defray the charges which will come in course of payment during the year ending 31st day of March 195 , in respect of 'Police'."

The motion was adopted.

Mr. SPEAKER.—The House will now adjourn for lunch.

The Assembly adjourned for Lunch at Thirty Minutes past Three of the Clock and reassembled at Four of the Clock, Mr. Speaker (The Hon'ble Sri V. Venkatappa) in the Chair.

Demand No. 15.—1 21 Medical.

The Hon'ble Sri H. C. DASAPPA (Minister for Finance and Industries).—Sir, (on behalf of the Hon'ble Sri K. Chengalaraya Reddy and on the recommendation of His Highness the Maharaja I beg to move:

"That a supplementary sum not exceeding Rs. 6,10,925 be granted to the Government to defray the charges which will come in course of payment during the year ending 31st day of March 1951, in respect of 'Medical'."

At this stage (the Hon'ble Sri K. Chengalaraya Reddy entered the Hall).

The Hon'ble Sri K. CHENGALARAYA REDDY (Chief Minister).—Sir, I owe a word of explanation to the

Hon'ble Speaker and the House. I was in the midst of a conference with the Chief Commissioner of Coorg and so I could not be in time to move the demand.

Mr. SPEAKER.—Motion moved.—

" That a supplementary sum not exceeding Rs. 6,10,925 be granted to the Government to defray the charges which will come in course of payment during the year ending 31st day of March 1951, in respect of 'Medical'."

***Mushir-ul-Mulk J. MOHAMED IMAM** (Chitaldrug *cum* Tumkur—Muslim).—Sir, while generally according my support to this demand I wish to make one or two observations. It is a general complaint that hospitals, specially in taluk headquarters and district headquarters, do not receive their supply of medicine and other materials necessary in time. It is a matter of fact that many hospitals for want of necessary drugs and chemicals are not discharging their duties towards the patients as efficiently as they ought to and I understand that there is something wrong with the Medical Stores. The indents are sent by the respective Assistant Surgeons in time; but for years together those indents are not honoured and the necessary supplies are not made. I urge on the Government to go into the matter and ascertain the reasons why the supplies are not made regularly to these hospitals.

Secondly, regarding diet, clothing and furnishing of wards I must bring to the notice of the Hon'ble Chief Minister one or two factors. It is all right in big hospitals in Bangalore or Mysore and in some district hospitals. But there are wards in taluk headquarters which are very poorly furnished. They have not got sufficient number of cots. Even if there are cots there is no bedding or linen or curtains and other accessories which are absolutely needed by the patients.

The Hon'ble Sri K. CHENGALARAYA REDDY.—Are curtains being supplied?

Janab J. MOHAMED IMAM.—Yes, in the Victoria Hospital for example; and in Hiriyur and other places which are highly malarial, it is in the interest of the patients to supply curtains. As a matter of fact in the Davangere hospital, I find that the furnishing is very poor. I saw patients lying on the cuddapah flooring. There are no cots and no linen. I feel that wherever provision has been made for in-patient wards, there the Government should take necessary steps for properly furnishing them and giving proper facilities.

Regarding diet, I must point out that the arrangements made in some of the smaller hospitals is thoroughly unsatisfactory. Sometimes the patients themselves are asked to carry their food or to make their own arrangements. Often it happens that patients are given food which should not be given. For example, if a patient is suffering from pneumonia or enteric disease, instead of giving him a particular food he is given rice which ought not to be given. There is no provision for supply of milk or bread. Regarding these three matters, *viz.*, supply of medicines and drugs, which should be made in time; secondly, furnishing with cots and supply of linen; and thirdly, diet which must be made on an adequate scale, I beseach and implore the Hon'ble Chief Minister to pay particular attention, so that the patients may have the necessary facilities.

With these points I generally support the demand.

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಮುಖ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಹೊರಗಡೆಯಿಂದ ತರಿಸಬೇಕಾಗಿರತಕ್ಕ ಕೆಲವು ಔಷಧಿಗಳಿಗಾಗಿ 5ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ ಹಣವನ್ನು ಒದಗಿಸಬೇಕೆಂದು ಬಂದಿರುವ ಈ ಬೇಡಿಕೆಯ ಸಂದರ್ಭದಲ್ಲಿ ಜನಾಬ್ ಇಮಾಂರವರು ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಸಂಸ್ಥಾನಾವಳಿ ಇರತಕ್ಕ ಅನೇಕ ಆಸ್ಪತ್ರೆಗಳಲ್ಲಿ ವ್ಯಾಧಿಯಿಂದ ನರಳುತ್ತಿರತಕ್ಕ ಸಹೋದರ ಸಹೋದರಿಯರಿಗೆ ಎಲ್ಲಾ ವಿಧವಾದ ಸೌಕರ್ಯಗಳನ್ನು ಒದಗಿಸಬೇಕೆಂಬುದೇ ಸರ್ಕಾರದವರ ಆಶಯವಾಗಿದೆ. ಈ ದೃಷ್ಟಿಯಿಂದರೇ ಸಾಧ್ಯವಾದಷ್ಟುಮಟ್ಟಿಗೆ ಸಾರ್ವಜನಿಕರಿಗೆ ವೈದ್ಯ ಕೀಯ ಸೌಲಭ್ಯ ದೊರೆಯಲೆಂದು ಉದಾರ ನೀತಿಯನ್ನನುಸರಿಸಿ ಸರ್ಕಾರದವರು ಅನೇಕ ಕಡೆ ಆಸ್ಪತ್ರೆಗಳನ್ನು ಏರ್ಪಡಿಸಿದ್ದಾರೆ. ಇಡೀ ಭಾರತದಲ್ಲಿ ಎಲ್ಲಿ

* Speech not revised by the Member concerned.

(ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು).

ನೋಡಿದರೂ ಮೈಸೂರು ಸಂಸ್ಥಾನದಲ್ಲಿರುವಷ್ಟು ಆಸ್ಪತ್ರೆಗಳು ಇನ್ನೆಲ್ಲೂ ಇಲ್ಲವೆಂದು ನಾನು ಹೇಳಬಲ್ಲೆ. ಅದೂ ಬರೀ ಸಂಖ್ಯೆಯಲ್ಲಿ; ಇಷ್ಟಿಷ್ಟು ಜನರಿಗೆ ಇಷ್ಟಿಷ್ಟು ಆಸ್ಪತ್ರೆಗಳೆಂದು ನೋಡುವ ಪಕ್ಷಕ್ಕೂ ನಮ್ಮಲ್ಲಿ ಆಸ್ಪತ್ರೆಗಳ ಸೌಕರ್ಯ ಜಾಸ್ತಿಯಿದೆಯೆಂದು ಹೇಳಬಹುದು. ಇದೊಂದು ಸಂತೋಷದ ವಿಚಾರ ವಾದರೂ ನಾವಿನ್ನೂ ಗಮನಕೊಡಬೇಕಾದ ವಿಷಯ ಗಳು ಅನೇಕವಾಗಿವೆಯೆಂಬುದನ್ನು ಒಪ್ಪುತ್ತೇನೆ. ಈಚೆಗೆ ಕೆಲವು ವರ್ಷಗಳಿಂದ ಅನೇಕ ಆಸ್ಪತ್ರೆಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಸ್ಥಳೀಯ ಸಂಸ್ಥೆ ಗಳ ನೆರವಿನಿಂದ ಮತ್ತು ಉದಾರ ಸಹಾಯದಿಂದಲೂ ಅನೇಕ ಆಸ್ಪತ್ರೆಗಳಾಗಿವೆ. ಇಷ್ಟೆಲ್ಲಾ ಸಂಸ್ಥಾನಾ ಮಳೆ ಮಾಡಿದ್ದರೂ ಇಂದು ನಾವು ಯಾವ ಸ್ಥಿತಿಯಲ್ಲಿ ದ್ದೇವೆಂದರೆ, ಇಷ್ಟು ಆಸ್ಪತ್ರೆಗಳಲ್ಲೂ ಅಲ್ಲಿಗೆ ಬರುವ ರೋಗಿಗಳಿಗೆ, ಅದರಲ್ಲೂ ಅಲ್ಲಿಗೆ ಬಂದು ಅಲ್ಲೇ ಇರ ಬೇಕಾದ ರೋಗಿಗಳಿಗೆ, ವೈದ್ಯಕೀಯ ಚಿಕಿತ್ಸೆಗಳಿಗೆ ಅನುಕೂಲತೆಗಳನ್ನು ಹಾಲಿ ಕಲ್ಪಿಸಿಕೊಡುವುದೇ ಅಲ್ಲದೆ ಇನ್ನೂ ಹೆಚ್ಚಿಗೆ ಬೆಡ್ಡುಗಳಿಗೆ ಏರ್ಪಾಡು ಮಾಡ ಬೇಕಾಗಿದೆಯೆಂದು ತಿಳಿದು ಬಂದಿದೆ. ಇದೊಂದು ಬಹಳ ಮುಖ್ಯವಾದ ವಿಷಯ. ಹಾಲಿ ಆಸ್ಪತ್ರೆಗಳಲ್ಲಿ ರುವ ಬೆಡ್ಸ್ ಏನೂ ಸಾಲದೆಂದು ಹೇಳಿದ್ದಾರೆ ವಿಕ್ಟೋರಿಯಾ ಆಸ್ಪತ್ರೆಯೇ ಅಲ್ಲದೆ ಬಾಕಿ ನಗರಗಳಲ್ಲಿರ ತಕ್ಕ ಮತ್ತು ಟೌನ್‌ಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿಯೂ ಸಹ ಬೆಡ್ಸ್ ಸಾಕಾದಷ್ಟಿಲ್ಲವೆಂದು ತಿಳಿದುಬಂದಿದೆ. ಅಂತೂ ಅಲ್ಲಿಗೆ ಬರುವವರಿಗೆ ಯಾವುದಾದರೂ ರೀತಿ ಯಲ್ಲಿ ಸೌಲಭ್ಯ ಒದಗಿಸಬೇಕೆಂದು ಹೇಳಿ ಕೆಲವರನ್ನು ನೆಲದ ಮೇಲೆ ಮಲಗಿಸುವುದಕ್ಕೂ ಏರ್ಪಾಡು ಮಾಡ ಬೇಕೆಂದು ಹೇಳಿದ್ದೇವೆ. ಇಂದು ವಿಕ್ಟೋರಿಯ ಆಸ್ಪತ್ರೆಗೆ ತಾವುಗಳು ಹೋಗಿ ನೋಡುವುದಾದರೆ ಅಲ್ಲಿ ರೆಕ್ಕದ ಪ್ರಕಾರ 300 ಹಾಸಿಗೆಗಳಿರಬೇಕೆಂದಿದ್ದರೂ, ಅದಕ್ಕೆ ಎರಡರಷ್ಟು ಜನ ರೋಗಿಗಳಿರುವುದು ಕಂಡು ಬರುತ್ತದೆ. ಅನೇಕರನ್ನು ಎರಡು ಮಂಚಿಗಳ ಮಧ್ಯೆ ಮಲಗಿಸಿ ಅವಕಾಶ ಮಾಡಿಕೊಡಬೇಕಾದ ಪರಿಸ್ಥಿತಿ ಬಂದಿದೆ. ಸಾ ಮಾನ್ಯವಾಗಿ ಎಲ್ಲಾ ಆಸ್ಪತ್ರೆಗಳಲ್ಲೂ ಇರತಕ್ಕ ಪರಿಸ್ಥಿತಿ ಇದ್ದು. ಆದುದರಿಂದ ನಾವೇನುಮಾಡಬೇಕು? ಇರತಕ್ಕ ಕಟ್ಟಡಗಳನ್ನೂ ಮತ್ತು ಬೆಡ್ಡುಗಳನ್ನೂ ಜಾಸ್ತಿ ಮಾಡ ಬೇಕು. ಇದೆಲ್ಲಕ್ಕೂ ಬಹಳವಾಗಿ ಹಣವನ್ನೊದಗಿಸಬೇ ಕಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ನೋಡುವುದಾದರೆ ಅಲ್ಲಿ ಖಾಸಗಿ ಮಹನೀಯರ ಸಹಾಯದಿಂದ ಆಸ್ಪತ್ರೆ ಗಳು ಪ್ರಾರಂಭವಾಗಿ ಒಳ್ಳೆಯ ಸ್ಥಿತಿಯಲ್ಲಿವೆ. ಅಲ್ಲಿ ರೋಗಿಗಳಿಗೆ ಬೇಕಾದಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಾರೆ. ನಮ್ಮಲ್ಲಿಯೂ ಅಂಥವು— ಸೆಂಟ್ ಮಾರ್ಥಾರವರ ಆಸ್ಪತ್ರೆ, ಮಿಷನ್ ಆಸ್ಪತ್ರೆ ಮುಂತಾದುವು ಇದ್ದರೂ ಅವುಗಳ ಸಂಖ್ಯೆ ಹೆಚ್ಚಲ್ಲ. ಇವುಗಳು ಇನ್ನೂ ಜಾಸ್ತಿಯಾಗಬೇಕು. ಏಕೆಂದರೆ ಸರ್ಕಾರದವರ ಹಣಕಾಸಿನ ಸ್ಥಿತಿಯನ್ನು ನೋಡುವು ದಾದರೆ ಇದಕ್ಕೆ ಇನ್ನೂ ಹೆಚ್ಚಿಗೆ ಹಣ ಒದಗಿಸಬೇಕೆಂದರೆ ಕಷ್ಟವಿದೆ. ಅವರು ಖರ್ಚು ಮಾಡುವುದಕ್ಕೂ ಒಂದು ಪರಿಮಿತಿಯಿದೆ. ಬಡ್ಜೆಟ್ಟಿನಲ್ಲಿ ಒದಗಿಸಿರುವುದಕ್ಕಿಂತ ಹೆಚ್ಚಿಗೆ ಕೊಡಲು ಅವಕಾಶವಿಲ್ಲದಂತೆ ನಮ್ಮ ಕೈಚಕಾಲು ಕಟ್ಟಿದೆ. ನದ್ಯದ ಹಣಕಾಸಿನ ಸ್ಥಿತಿಯಲ್ಲಿ ನಮ್ಮ ಬಡ್ಜೆಟ್ಟಿನಲ್ಲಿ ಇದಕ್ಕಾಗಿ ಹೆಚ್ಚಿಗೆ ಒದಗಿಸುವುದೂ ಕಷ್ಟ.

ಇದು ಈಗಿರತಕ್ಕ ಸಾಮಾನ್ಯ ಪರಿಸ್ಥಿತಿಯ ವಿಷಯ. ಬಡ್ಜೆಟ್ಟಿನ ಮುಂದಿನ ಅಧಿವೇಶನದಲ್ಲಿ ಇದರ ವಿಷಯ ದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸಬಹುದು. ಒಟ್ಟಿನಲ್ಲಿ ಈಗ ಏನಾಗಿದೆಯೆಂದರೆ, ಹಾಲಿ ಬಡ್ಜೆಟ್ಟಿನಲ್ಲಿ ಒದಗಿಸಿರ ತಕ್ಕ ಹಣ ಸಾಲದೆ ಬಂದಿದೆ. ರೋಗಿಗಳ ಸಂಖ್ಯೆ ಬರಬರುತ್ತಾ ಜಾಸ್ತಿಯಾಗಿರುವುದೇ ಇದಕ್ಕೆ ಕಾರಣ. ಪ್ರತಿವರ್ಷವೂ ಎಷ್ಟು ಜನರು ಬರುತ್ತಾರೆಂದು ನಾವು ನಿರೀಕ್ಷಿಸಿದ್ದೆವೋ ಅದಕ್ಕಿಂತ ಬಹಳ ಹೆಚ್ಚಾಗಿದೆ. ಅಂದ ಮಾತ್ರಕ್ಕೆ ದೇಶದಲ್ಲಿ ವ್ಯಾಧಿಗಳು ಜಾಸ್ತಿಯಾಗಿವೆ ಯೆಂದು ಅರ್ಥವಲ್ಲ, ಜನರಲ್ಲಿ ಆಸ್ಪತ್ರೆಗೆ ಬರುವ ಅಭ್ಯಾಸ ಹೆಚ್ಚು ಹೆಚ್ಚಿಗೆ ಉಂಟಾಗುತ್ತಿದೆ. ಆದ್ದರಿಂದ ಈ ಸಂದರ್ಭ ಬಂದಿದೆ. ಈ ಕಾರಣದಿಂದ, ಹಾಲಿ ಔಷಧಿಗಳಿಗಾಗಿ ಕೊಟ್ಟಿರತಕ್ಕ ಹಣ ಏನೇನೂ ಸಾಲದಾಗಿದೆ. ಈಗ ನಾವು ಕೇಳಿರುವ 5 ಲಕ್ಷ ರೂಪಾಯಿಗಳೂ ಸಾಲದೆಂದು ಹೇಳಿ ಇರಾಖೆಯವರು 12 ಲಕ್ಷ ರೂಪಾಯಿಗಳ ಡಿಮ್ಯಾಂಡ್ ಎಸ್ಟಿಮೇಟ್ ಆಗಿದೆಯೆಂದು ಹೇಳಿದ್ದಾರೆ. ಆದರೂ ನಾವು ನಮ್ಮ ಹಣ ಕಾಸಿನ ಸ್ಥಿತಿಯನ್ನು ನೋಡಿಕೊಂಡು 5 ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತೇವೆಂದು ಹೇಳಿ ಅಷ್ಟಕ್ಕೆ ಮಾತ್ರ ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ತಂದಿದ್ದೇವೆ.

ಈ ಖರ್ಚು ಇಷ್ಟೊಂದು ಏರುವುದಕ್ಕೆ ಇನ್ನೊಂದು ಕಾರಣವೇನೆಂದರೆ ಹೊರದೇಶದಿಂದ ಬರತಕ್ಕಂಥ ಈ ಔಷಧಿಗಳ ಬೆಲೆ ವ್ಯಾಪಾರದ ಉಬ್ಬರದ ದೆಶೆಯಿಂದ ಒಂದಕ್ಕೆ ನಾಲ್ಕರಷ್ಟು ಹೆಚ್ಚಿದೆ. ಆ ಪ್ರಕಾರ ಹಿಂದೆ ಇದೇ ಔಷಧಿಗಳಿಗೆ ಏನು ಕೊಡಬೇಕಾಗುತ್ತಿತ್ತೋ ಅದಕ್ಕೆ ನಾಲ್ಕರಷ್ಟು ಕೊಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಈ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು.

ಈಗ ಜನಾಬ್ ಇಮಾಂರವರು ಕೇಳಿದ್ದಕ್ಕೆ ಉತ್ತರ ಹೇಳುತ್ತೇನೆ. ಇರಾಖೆಯವರು ಇಂಡೆಂಟ್ ಮಾಡಿದ ಮೇಲೆಯೂ ಸರಿಯಾಗಿ ಸರಬರಾಯಿಯಾಗುತ್ತಿಲ್ಲವೆಂದು ಅವರು ಹೇಳಿದರು. ಕಾರಣ ಇಷ್ಟೆ. ಅವರು ಇಂಡೆಂಟ್ ಮಾಡುವುದನ್ನು ಹೆಚ್ಚಿಗೆ ಪ್ರಮಾಣದಲ್ಲಿ ಮಾಡಿರುತ್ತಾರೆ. ರೋಗಿಗಳು ಬರುವ ಸಂಖ್ಯೆ ಜಾಸ್ತಿಯಾಗಿರುವುದರಿಂದ ಇಂಡೆಂಟೂ ಜಾಸ್ತಿಯಾಗಿರುತ್ತದೆ. ಅದರ ಪ್ರಕಾರ ಎಷ್ಟು ಹೆಚ್ಚಿಗೆ ಕೊಡಬೇಕಾಗುತ್ತದೋ ಅದು Additional ಡಿಮ್ಯಾಂಡ್ ಆಗಿ ಬರುತ್ತದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಅದನ್ನೊಪ್ಪುತ್ತೇನೆ. ಆದರೆ ಕೊಡುವಾಗ ಎಲ್ಲರಿಗೂ ಕೊಡ ಬೇಕೆಂದು ಹೇಳುತ್ತೇನೆ ಅಷ್ಟೆ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇರುವ ಕಷ್ಟಗಳನ್ನೆಲ್ಲಾ ತಿಳಿಸಿದ್ದೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಂಡೆಂಟನ್ನು ಕೊಡುವಾಗ, ಈ ವರ್ಷದ ಇಂಡೆಂಟ್ ಎಷ್ಟು, ಹಿಂದಿನ ವರ್ಷದ ಇಂಡೆಂಟ್ ಎಷ್ಟು ಎಂಬುದನ್ನು ನೋಡಿ ಕೊಂಡು ಹೆಚ್ಚಿಗೆ ಏನೂ ಕೊಡದೆ ಇದ್ದರೂ ಹಿಂದಿನ ವರ್ಷದಷ್ಟಾದರೂ automatic ಆಗಿ ಸರ್ಕಾರದ್ದಿ ಅವರಿಗೆ ಕೊಡುವಂತೆ ಮಾಡಿದರೆ ಸಾಕು.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹಾಗೆಯೇ ಯೋಚನೆ ಮಾಡುತ್ತಿದ್ದೇವೆ. ಆದರೆ ಹೋದ ವರ್ಷ ಇಂಡೆಂಟ್ ಕೊಟ್ಟು ಎಷ್ಟು ತರಿಸಬೇಕಾಗಿತ್ತೋ, ಅದನ್ನು ತರಿಸದೆ ಹೋಗಿದ್ದರಿಂದ ಹಿಂದಿನ ವರ್ಷದ್ದೂ ಈಗ ಬಂದು ಅದನ್ನು ಕೊಡಬೇಕಾಗಿ ಬಂದಿದೆ. ಇನ್ನು ಮೇಲೆ ಇದಕ್ಕೆ ಅವಕಾಶವಿಲ್ಲದಂತೆ ಸಕಾಲದಲ್ಲೇ ಇಂಡೆಂಟ್ ಕೊಟ್ಟು ತರಿಸಿಕೊಳ್ಳುವುದಕ್ಕೆ ಸರ್ಕಾರ ದವರು ಎಲ್ಲಾ ಏರ್ಪಾಡನ್ನೂ ಮಾಡುತ್ತಾರೆ.

ಎರಡನೆಯದಾಗಿ diet ಮತ್ತು clothing ವಿಷಯ. ಇದೂ ಕೂಡ ಹಿಂದೆ ಇದ್ದದ್ದಕ್ಕಿಂತ ಒಂದಕ್ಕೆ ಎರಡರ

ಪ್ಪಲ್ಲ, ನಾಲ್ಕರಷ್ಟು ಜಾಸ್ತಿಯಾಗಿದೆ. ಹೀಗಾಗಿ ಹಿಂದಿನ ಬಡ್ಜೆಟ್ಟಿನಲ್ಲಿ ನಮೂದಿಸಿರುವುದಕ್ಕಿಂತ ಬಹಳ ಮಿತಿ ಮೀರಿ ಈ ಖರ್ಚು ಏರಿದೆ. ಇಂಥ ಕಷ್ಟಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದರೂ ಸಾಧ್ಯವಾದಷ್ಟೂ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. diet ಮತ್ತು clothing ವಿಚಾರದಲ್ಲಿ ಇನ್ನೊಂದು ವಿಚಾರ ಹೇಳಬೇಕಾಗಿದೆ. ಇವುಗಳ ಮಟ್ಟಿಗೆ ಸಾಮಾನ್ಯವಾಗಿ ನಾವೇನು ಒದಗಿಸಲು ಮಂಜೂರು ಮಾಡಿರುತ್ತೇವೆಯೋ ಅಷ್ಟಾದರೂ ಸರಿಯಾಗಿ quality ಯಲ್ಲಿಯೂ ಮತ್ತು quantity ಯಲ್ಲಿಯೂ ಸರಬರಾಯಿಯಾಗುವಂತೆ ಆಚರಣೆಗೆ ತರಬೇಕೆಂದು ಮಾಡಿದ್ದೇವೆ. ಈ ವಿಚಾರದಲ್ಲಿ ಈಗ ಕೆಲವು ಆಸ್ಪತ್ರೆಗಳಲ್ಲಿ ಆಕ್ಷೇಪಣೆಗಳು ಬಂದಿರುವುದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹೌದು, quality ಮತ್ತು quantity ಯನ್ನು ತಾವು ensure ಮಾಡಬೇಕಾದ್ದು ಅವಶ್ಯಕ.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ವಿಚಾರದಲ್ಲಯೇ ತಕ್ಕ ಬಂದೋಬಸ್ತು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಟ್ಟಿನಲ್ಲಿ ಈಗಿರತಕ್ಕ ಅನಾನುಕೂಲಗಳು ಸರ್ಕಾರದವರ ಗಮನಕ್ಕೆ ಬಂದಿವೆ. ಅವುಗಳನ್ನೆಲ್ಲಾ ತಪ್ಪಿಸುವುದಕ್ಕೆ ಸಾಕಾದಷ್ಟು ಪ್ರಯತ್ನ ಮಾಡುತ್ತೇವೆ. ಈ ವಿಷಯದಲ್ಲಿ ಇರತಕ್ಕ ಅನಿವಾರ್ಯಗಳನ್ನೂ ತಮಗೆ ತಿಳಿಸಿದ್ದೇನೆ. ಮುಂದಿನ ಬಡ್ಜೆಟ್ ಅಧಿವೇಶನದಲ್ಲಿ ಈ ವಿಚಾರಕ್ಕೇ ಮುಖ್ಯವಾಗಿ ಗಮನ ಕೊಡಬೇಕಾಗಿ ಬರುತ್ತದೆ. ಆದ್ದರಿಂದ ಜನಾಬ್ ಇಮಾಂ ರವರು ಹೇಳಿರತಕ್ಕ ವಿಷಯಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಅವನ್ನು ಸಾಧ್ಯವಾದಷ್ಟು ನಿವಾರಿಸುವುದಕ್ಕೆ ಪ್ರಯತ್ನ ಪಡುತ್ತೇವೆಂಬ ಭರವಸೆಯ ಮೇಲೆ ಅವರು ತಮ್ಮ ಸೂಚನೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

Sri V. S. NARAYANA RAO (Bangalore City—General).—ಯೂರೋಪ್ ಮೆಡಿಸಿನ್ ಎಂದರೇನು? Allopathic ಎಂತಲೇ?

The Hon'ble Sri K. CHENGALARAYA REDDY.—Allopathic medicines, purchased from abroad or here, wherever they are available.

Mr. SPEAKER.—The question is:

"That a supplementary sum not exceeding Rs. 6,10,925 be granted to the Government to defray the charges which will come in course of payment during the year ending 31st day of March 1951, in respect of 'Medical'."

The motion was adopted.

DEMAND No. 18.—24. CIVIL WORKS.

The Hon'ble Sri T. MARIAPPA (Home Minister).—Sir, on the recommendation of His Highness the Maharaja, I beg to move:

"That a supplementary sum not exceeding Rs. 25,39,750 be granted to the Government to defray the charges which will come in course of payment during the year ending 31st day of March 1951 in respect of 'Civil Works.'"

Mr. SPEAKER.—Motion moved:

"That a supplementary sum not exceeding Rs. 25,39,750 be granted to the Government to defray the charges which will come in course of payment during the year ending 31st day of March 1951, in respect of 'Civil Works'."

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಹಾಗೆ ತಾವು 23 ಲಕ್ಷ ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡ ಕಟ್ಟಡಗಳನ್ನು ಈಗ ಏತಕ್ಕೆ ಉಪಯೋಗ ಮಾಡುತ್ತಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಬಗ್ಗೆ ನನ್ನಲ್ಲಿ ಒಂದು ದೊಡ್ಡ ಪಟ್ಟಿಯೇ ಇದೆ. ಅದನ್ನೆಲ್ಲಾ ಹೇಳಬೇಕಾದರೆ ಬಹಳ ಕಾಲ ತೆಗೆದುಕೊಳ್ಳಬೇಕಾಗುತ್ತದೆ. ಮೊದಲು ಈ ಕಟ್ಟಡಗಳನ್ನೆಲ್ಲಾ ಶ್ರೀಮಂತ ಮಹಾರಾಜರವರೇ ತಮ್ಮ ಸ್ವಂತ ಹಣದಿಂದ ಕಟ್ಟಿಸಿ ಅಲ್ಲಿ ತಮ್ಮ ಮಿಲಿಟರಿ ಮತ್ತು ಪೋಲೀಸ್ ಇಷ್ಟೆಂಟ್ರಿ ಪಡೆಗಳನ್ನಿಟ್ಟಿದ್ದರು. ಆದರೆ ಈಗ ನಾವೇ ಆ ಮಿಲಿಟರಿ ಮತ್ತು ಪೋಲೀಸನ್ನು ನಮ್ಮ ಜವಾಬ್ದಾರಿಗೆ ತೆಗೆದುಕೊಂಡಮೇಲೆ, ಅವರಿಗೆ ಕಟ್ಟಿಸಿಕೊಟ್ಟು ಅವರಿಗೆ, ಒದಗಿಸಿಕೊಡಲಾಗಿದ್ದ ಅನುಕೂಲತೆಗಳನ್ನೆಲ್ಲಾ ನಾವು ಕೊಂಡುಕೊಂಡು, ಅವುಗಳನ್ನೇ ಈಗ ಪುನಃ ಅವರಿಗೇ ಕೊಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ಅದರಲ್ಲಿ ಯಾರಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—His Highness's body guard ಮತ್ತು ಪೋಲೀಸ್ ದಳಗಳು ಇದ್ದಾರೆ.

*ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಅವರು ಮೊದಲಿಂದಲೂ ಇದ್ದೇ ಇದ್ದಾರೆ. ಅವರನ್ನು ಅಲ್ಲಿ ಇಡುವುದಕ್ಕೆ ತಾವು ಏಕೆ ಪ್ರತ್ಯೇಕವಾಗಿ ಅವುಗಳನ್ನು ಕ್ರಯಕ್ಕೆ ಕೊಂಡು ಕೊಂಡಿರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—It was the property of His Highness. ನಾವು ಶ್ರೀಮಂತ ಮಹಾರಾಜರವರು ಇಟ್ಟುಕೊಂಡಿದ್ದ ಮಿಲಿಟರಿ, ಇಷ್ಟೆಂಟ್ರಿ, ಮತ್ತು ಅವರ ಬಾಡಿ ಗಾರ್ಡು ಇತ್ಯಾದಿಗಳ ಜವಾಬ್ದಾರಿಯನ್ನೆಲ್ಲಾ, ಸರ್ಕಾರಕ್ಕೆ ತೆಗೆದುಕೊಳ್ಳಲಾಯಿತು. ಈಗಿನ ಹೊಸ ರಾಜ್ಯಾಂಗದ ಪ್ರಕಾರ ಇಂಡಿಯ ಸರ್ಕಾರದವರಿಗೂ, ಶ್ರೀಮನ್ಮಹಾರಾಜರವರಿಗೂ ಮತ್ತು ನಮ್ಮ ಸರ್ಕಾರಕ್ಕೂ ಆಗಿರತಕ್ಕ ಒಪ್ಪಂದದ ಪ್ರಕಾರ, ಅವುಗಳ ಜವಾಬ್ದಾರಿಯನ್ನೆಲ್ಲಾ ನಮ್ಮ ಸರ್ಕಾರ ತೆಗೆದುಕೊಳ್ಳಬೇಕಾಗಿ ಬಂತು. ಹಾಗೆ ಆ ಸಿಬ್ಬಂದಿಯನ್ನೆಲ್ಲಾ ನಾವು ನಮ್ಮ ಆಡಳಿತಕ್ಕೆ ತೆಗೆದುಕೊಂಡ ಮೇಲೆ ನಾವು ಅವರಿಗೆ ಕ್ವಾರ್ಟರ್ಸ್ ಇತ್ಯಾದಿಗಳನ್ನು ಕೊಡಬೇಕಾಯಿತು. ಹಾಗೆ ಇದುವರೆಗೂ ಇವರುಗಳಿಗೆ ಒದಗಿಸಿಕೊಟ್ಟಿದ್ದ ವಸತಿ ಸೌಕರ್ಯಗಳೆಲ್ಲವೂ ಕೇವಲ ಶ್ರೀಮಂತ ಮಹಾರಾಜರ ಸ್ವಂತ ಹಣದಿಂದ, ಅವರ ಜವಾಬ್ದಾರಿಯಲ್ಲಿ ಕಲ್ಪಿಸಿಕೊಡಲಾಗಿತ್ತು. ಈ ಸ್ವತ್ತುಗಳೊಂದಕ್ಕೂ ಸರ್ಕಾರದಿಂದ ಒಂದು ಕಾಸೂ ಕೂಡ ಬಿದ್ದಿಲ್ಲ. ಆದ್ದರಿಂದ ಅವುಗಳನ್ನೆಲ್ಲಾ ನಾವೀಗ ಸರ್ಕಾರಕ್ಕೆ ಕೊಂಡು ಕೊಳ್ಳಬೇಕಾಯಿತು.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ತಾವೀಗ ಇಂತಿಂಥಾದ್ದೇ ಅರಮನೆಯ ಸ್ವತ್ತು, ಇಷ್ಟಿಷ್ಟೇ ಸ್ವತ್ತು, ಶ್ರೀಮಂತ ಮಹಾರಾಜರಿಗೆ ಸೇರಿದ್ದು, ಇಂಥಾದ್ದೇ ಸರ್ಕಾರದ ಸ್ವತ್ತು ಎಂದು ಎಲ್ಲವನ್ನೂ ನಿರ್ಧರ ಮಾಡಿದ್ದೀರೋ?

---

*Speech not revised by the Member concerned

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—I would like to have some more information. ಈ ಮಿಲಿಟರಿ ಪಡೆಗಳ ಪೈಕಿ ಈಗ ತಮ್ಮಲ್ಲಿರುವುದೆಷ್ಟು ಮತ್ತು ಕೇಂದ್ರಕ್ಕೆ ತಾವು ಕೊಟ್ಟಿದ್ದೆಷ್ಟು ಮತ್ತು ಶ್ರೀಮಂತಮಹಾರಾಜರವರ ಸ್ವಂತಕ್ಕೆ ಎಷ್ಟಿತ್ತು ಎಂಬುದನ್ನೆಲ್ಲಾ ಕೊಂಚ ತಿಳಿಸಿದರೆ ಚೆನ್ನಾಗಿರುತ್ತೆ. ಹಾಗೆ ಕೇಂದ್ರಕ್ಕೆ ಕೊಟ್ಟಿರುವುದನ್ನು ಕೈಬಿಟ್ಟುಕೊಂಡರೆ, ಇನ್ನುಳಿಯುವ ಸಿಬ್ಬಂದಿಗ್ಗಾಗಿ ನಾವು ಈ ಕ್ವಾರ್ಟರ್ಸ್ ಬಗ್ಗೆ ಎಷ್ಟು ಖರ್ಚು ಮಾಡಬೇಕಾಗಿದೆಯೆಂಬುದು ತಿಳಿದು ಬರುತ್ತೆ.

The Hon'ble Sri K. CHENGALARAYA REDDY.—That is not the correct position.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೂ, ಇದಕ್ಕೂ ತಾಪು ಹೋಲಿಸಬಾರದು. ಇವೆಲ್ಲಾ ಹೆಡರರ್ ಸಮಸ್ಯೆಗಳು ಮತ್ತು ಆ ಬಗ್ಗೆ ಕೆಲವು ಷರತ್ತುಗಳಿರುವುದೂ ಎಲ್ಲಾ ನಿಜ. ಮೈಸೂರಿಗೆ ಎಷ್ಟಿರಬೇಕೆಂದು ಈಗಾಗಲೇ ಇತ್ಯರ್ಥ ಮಾಡಲಾಗಿದೆ. ಆದರೆ ನಮ್ಮ ಮೈಸೂರಿನಲ್ಲಿ His Highness's body guard ಎಷ್ಟಿತ್ತೋ ಅಷ್ಟರ ಪೂರ್ತಿ ಜವಾಬ್ದಾರಿಯನ್ನೂ ಈಗ ನಮ್ಮ ಸರ್ಕಾರ ಹೊರಬೇಕಾಗಿದೆ. ಆ ಪೈಕಿ ಈಗ ನಮ್ಮಲ್ಲೀಗ ಇರತಕ್ಕವು ಒಂದು ಇಫೆಂಟ್ರಿ ಯೂನಿಟ್ ಮತ್ತು His Highness's, body guard units ಎರಡು, ಮತ್ತು ಇವುಗಳಿಗೆ ನಂಬಂಧಪಟ್ಟ ಕೆಲವು ಕಟ್ಟಡಗಳು ಇಷ್ಟು ಮಾತ್ರ. ಈ ಕಟ್ಟಡಗಳ ತಪಶೀಲು ಬಹಳ ದೊಡ್ಡದಾಗಿದೆ. ಕೆಲ ಕೆಲವು ಮಾತ್ರ ಹೇಳುತ್ತೇನೆ. His Highness's body guard Barracks; Horse stalls, Bullock sheds, School buildings ಮತ್ತು family quarters ಮತ್ತು Rambles ಎಂಬ ಕ್ವಾರ್ಟರುಗಳು, Sunny side quarters nos. 5 and 6, Mosque, Tiled building portion, ಹೀಗೆ ಅನೇಕ ಕಟ್ಟಡಗಳಿವೆ.

ಶ್ರೀ ಬಿ. ಹುಚ್ಚೇಗೌಡರು.—ಆ ಮಶೀದಿಯ ಬೆಲೆ ಎಷ್ಟು?

ಶ್ರೀ ಎ. ಎಸ್. ನಾರಾಯಣರಾಯರು (ಬೆಂಗಳೂರು ನಗರ).—ಶ್ರೀಮಂತಮಹಾರಾಜರವರು ಆ ಸ್ಕೂಲು ಮತ್ತು ಮಶೀದಿಯನ್ನು ಒಂದು ಟ್ರಸ್ಟಿಗೆ ದಾನ ಮಾಡಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು ದಾನ ಮಾಡಿದ್ದಾರೆ. ಇನ್ನೂ ಅನೇಕ ಕಟ್ಟಡಗಳಿವೆ, ರೇಷ್ಟ್ ಷಾಪ್, ಬಾಡಿಗಾರ್ಡ್ ಕಟ್ಟಡಗಳು ನಂ. 1, 2, 3, 4, 5, 6 ಮತ್ತು ಇವುಗಳಲ್ಲದ್ದ ಮರದ ಸಾಮಾನು, ಪಗ್ಗೈರೆಗಳೂ ಇವೆಲ್ಲ ಇವೆ.

Over a series of years they have built buildings. Now when we have taken up the entire liability, His Highness is free to sell away those buildings. Therefore we have purchased those buildings and those buildings have become Government buildings now. So naturally we have to pay for them.

ಹೀಗೆ ಇವೆಲ್ಲವೂ ಶ್ರೀಮಂತ ಮಹಾರಾಜರವರ ಸ್ವಂತ ಆಸ್ತಿಯಾಗಿದ್ದವು. ಈಗ ಅವುಗಳ ಅಗತ್ಯ ಸರ್ಕಾರಕ್ಕಿದ್ದ ಪ್ರಯುಕ್ತ, ಅವುಗಳನ್ನು ಕೊಂಡುಕೊಳ್ಳಬೇಕಾಯಿತು. ಈಗ ಆ ಕಟ್ಟಡಗಳ ಪೈಕಿ ಒಂದು ಇಫೆಂಟ್ರಿ ಮತ್ತು ಎರಡು ಸ್ಕ್ವಾಡ್ರನ್ ಬಾಡಿಗಾರ್ಡುಗಳನ್ನಿಟ್ಟುಕೊಳ್ಳುವುದಕ್ಕೆ ಎಷ್ಟು ಬೇಕೋ ಅಷ್ಟನ್ನಿಟ್ಟು ಕೊಂಡು ಉಳಿದಿದ್ದನ್ನು ಬಾಕಿ ಕೆಲಸಗಳಿಗಾಗಿ ಉಪಯೋಗಿಸಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಬಾಕಿ ಕೆಲಸಗಳೆಂದರೆ ಯಾವುದು?

ಮಾನ್ಯ ಶ್ರೀ ಟಿ. ಮರಿಯಸ್ವಾನವರು.—ಬಾಕಿ ಕೆಲಸಕ್ಕೆಂದರೆ ಬಾಕಿ ಸರ್ಕಾರಿ ಉಪಯೋಗಕ್ಕೆ ಮಿಲಿಯೋಗ ಮಾಡಿಕೊಳ್ಳಲಾಗುತ್ತದೆ. ಈ ಕಟ್ಟಡಗಳೆಲ್ಲದರ ಬಗ್ಗೆ ಅವರು ಅಂದಾಜು ತಯಾರು ಮಾಡಿಸಿದ್ದರಲ್ಲಿ ಮತ್ತು ಪುನಃ ಅವುಗಳನ್ನೆಲ್ಲಾ ನಮ್ಮ ಇಂಜಿನಿಯರುಗಳಿಂದ ಎಸ್ಟಿಮೇಟ್ ಮಾಡಿ ಬೆಲೆ ಕಟ್ಟಿಸಿದ್ದರಲ್ಲಿ ಅದು 26 ಲಕ್ಷ 78 ಸಾವಿರ ರೂಪಾಯಿಗೆ ಬಂದಿತು. ನಮ್ಮ ಅಂದಾಜಿನ ಪ್ರಕಾರ ಅದನ್ನು 23½ಲಕ್ಷಕ್ಕೆ ತೆಗೆದುಕೊಳ್ಳಬಹುದೆಂದು ತೀರ್ಮಾನ ಮಾಡಿಕೊಳ್ಳಲಾಯಿತು. ಅದರ ಬಗ್ಗೆ ಎಲ್ಲಾ ವ್ಯವಹಾರಗಳನ್ನೆಲ್ಲ ನಿರ್ಧಾರ ಮಾಡಲಾಗಿದೆ.

*The Hon'ble Sri K. CHENGALARAYA REDDY.—I would like to supplement the remarks of the Hon'ble Home Minister with a few words. When the Financial Integration took place and the transference of the Military to the Centre was effected, it covered only what are known as the Indian Standard Forces. There has been what is known as B Forces in our army over and above the Standard Forces sanctioned by the Government of India. So when we transferred the Army to the Centre, we had to take over the liability for the B Forces ourselves, and their maintenance did not become the responsibility of the Centre. So certain units of the Army continue to remain with us and they were mostly those which were occupying Bodyguard buildings and other buildings. That is one aspect. So when the transfer of the army and the buildings connected with the army took place, it is not as if the entire army comprising of the Standard Forces and the B Forces and the buildings appertaining to them could be transferred to the Government of India. If that had happened, perhaps we would have thought of transferring those buildings also to the Centre, whether the cost was incurred by the

* Speech not revised by the Member concerned.

Palace or otherwise. That was not the case. So the liabil ty for maintaining the B Forces continue to be ours and the buildings with Body guards continue to be with the Mysore Government. First point.

Second is, those buildings were contructed at the expense of the Palace. The Government did not pay towards the construction of those buildings. There are one or two buildings which the Government have bought. All that has been taken into account and it was found that tho-e buildings which we have now purchased, were constructed at the expense of the Palace. So when the transfer of the army took place, the Mysore Government took over the B Forces. The Palace have nothing to do with them. When we took over the B Forces and the buildings connected with them, the Palace naturally put forward the claim that those buildings were bu lt at their expense and so the Government would have to pu chase them a d take them over. Then we proceeded to ascertain the cost of the buildings and find out what the Palace paid and after negotiation, this price was fixed.

Thirdly, when we took over these buildings which belonged to the Palace because they were constructed at the expense of the Palace, it was not a losing bargain at all. We have gone into the matter and we are paying the sum of Rs. 23 lakhs towards these buildings. If we want to sell the buildings or utilise them for some other purpose, we are sure to realise more than Rs. 23 lakhs. It is estimated that we get a profi- of Rs. 5 lakhs or 7 lakhs if we are prepared to sell them. It is very likely that we may have to sell t' ose buildings or divert t' ose buil ings for some other use. The House will be made aware during the Budget Ses-ion that we do not propose to continue all these B Forces. We are going to content ourselves only with two Companies from next year. Otherwi e we have to spend to the extent of Rs. 12 to 16 lakhs. We have provided for Rs. 8 lakhs in the current year. We cannot immediately retrench. As a result of the agreement between the Government of India and ourselves and the Palace of His Highness the Maharaja also, it has been settled that we need maintain only two Companies and demobilise all the rest of the B Forces. That will cost only Rs. 3 lakhs hereafter from the end of next year onwards as against Rs. 16 lakhs which we were spending on this account If we reduce the B Forces to that extent, then the buildings will become available for other purposes or we can sell the buildings and realise our money. These are some of the detailed aspects of the transaction. I can assure the House that the Government are not the losers on this account.

Sri B. HUTCHE GOWDA.—Was the transaction made on book value or on the estimated value?

The Hon'ble Sri K. CHENGALARAYA REDDY.—The value estimated by the Public Works Department was higher and we negotiated with the Palace and fixed a lower price.

Mr. SPEAKER.—The question is:

"That a supplementary sum not exceeding Rs. 25,39,750 be granted to the Government to defray the charges which will come in course of payment during the year ending 31st day of March 1951, in respect of 'Civil Works'."

The motion was adopted.

DEMAND No. 19—24-A. Communications.

The Hon'ble Sri T. MARIAPPA (Home Minister).—Sir, on the recommendation of His Highness the Maharaja, I beg to move:

"That a supplementary sum not exceeding Rs. 2,00,0 0 be granted to the Government to defray the charges which will come in course of payment during the year ending 31st day of March 1951, in respect of 'Communications'."

We are buying these rollers from the Government of India Disposals. In this c nnect on it will be int resting for the Hon'ble Members on the Opposition to know that it was thro gh the good offices of Sri E. V. Ganapathi Iyer that we were able to get these rollers. They were not availab e easily and he had taken the trouble of finding them

(THE HON'BLE SRI T. MARIAPPA.)

out for us. We got them at a much cheaper rate from the Government of India Disposals.

Sri L. SIDDAPPA (Shimoga District—General).—So you wanted an intermediary to negotiate?

The Hon'ble Sri T. MARIAPPA.—No, it was just to find out where they were available.

Mr. SPEAKER.—Motion moved:

"That a supplementary sum not exceeding Rs. 2,00,000 be granted to the Government to defray the charges which will come in course of payment during the year ending 31st day of March 1951, in respect of 'Communications'."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ರೋಡ್ ರೋಲರುಗಳು ಈಗ ಇರುವುವು ಸಾಕಾಗುತ್ತವೆಯೆ ಅಥವಾ ಹೊಸದಾಗಿ ಏನಾದರೂ ತರಿಸಬೇಕೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಿರುವುದು ಸಾಲುವುದಿಲ್ಲ. ಸುಮಾರು 15 ಬರಬೇಕಾಗಿದೆ. ಕನಿಷ್ಪಪಕ್ಷ 12 ಆದರೂ ಮುಖ್ಯವಾಗಿ ಬೇಕು ಎಂದು ತರಿಸಲು ಪ್ರಯತ್ನಮಾಡಿದ್ದೇವೆ, ಆದರೆ ಇನ್ನೂ ಸಿಕ್ಕಿಲ್ಲ, ಶ್ರೀಗಣಪತಿ ಐಯ್ಯರ್‌ರವರಿಗೆ ಹೇಳಿ ಇಂಡಿಯಾ ಸರ್ಕಾರದೊಂದಿಗೆ ವ್ಯವಹರಿಸಿ ಈ ಬಗ್ಗೆ ಪ್ರಯತ್ನ ಮಾಡರಾಗಿದೆ. ನಮ್ಮಕ್ಕೆ 5 ತೆಗೆದುಕೊಳ್ಳುತ್ತಿದ್ದೇವೆ. ಇನ್ನೂ ಬೇಕಾದ್ದಕ್ಕೆ ಪ್ರಯತ್ನ ನಡೆಯುತ್ತಿದೆ.

Mr. SPEAKER.—The question is.—

"That a supplementary sum not exceeding Rs. 2,00,000 be granted to the Government to defray the charges which will come in course of payment during the year ending 31st day of March 1951, in respect of 'Communications.'"

The motion was adopted.

Demand No. 19A—24-B. Flying School.

The Hon'ble Sri T. MARIAPPA (Minister for Home).—Sir, on the recommendation of His Highness the Maharaja, I beg to move.

"That a supplementary sum not exceeding Rs. 55,000 be granted to the Government to defray the charges which will come in course of payment during the year ending 31st day of March 1951, in respect of 'Flying School.'"

Mr. SPEAKER.—Motion moved:

"That a supplementary sum not exceeding Rs. 55,000 be granted to the Government to defray the charges which will come in course of payment during the year ending 31st day of March 1951, in respect of 'Flying School.'"

Sri G. A. ACHARYA (Bangalore District—General).—We are not incurring the total expenditure on the Flying School. Is it not?

The Hon'ble Sri T. MARIAPPA.—No, a lot of reduction in the expenditure has taken place and this is with reference to an outstanding arrear to be paid to the Hindustan Aircraft.

Sri G. A. ACHARYA.—So, for the working of the school, does the Centre pay partly?

The Hon'ble Sri T. MARIAPPA.—They pay a subsidy of Rs. 35,000 per year.

Mr. SPEAKER.—The question is.—

"That a supplementary sum not exceeding Rs. 55,000 be granted to the Government to defray the charges which will come in course of payment during the year ending 31st day of March 1951, in respect of 'Flying School.'"

The motion was adopted.

Demand No. 20.—26. Education.

The Hon'ble Sri K. CHENGALARAYA-REDDY (Chief Minister).—Sir, on the recommendation of His Highness the Maharaja, I beg to move

"That a supplementary sum not exceeding Rs. 2,00,000 be granted to the Government to defray the charges which will come in course of payment during the year ending 31st day of March 1951, in respect of 'Education.'"

This is mainly towards the amounts payable on account of high price and dearness allowance. I do not think any further explanation is necessary to commend this motion for the acceptance of of the House.

Mr. SPEAKER.—Motion moved.—

"That a supplementary sum not exceeding Rs. 2,00,000 be granted to the Government to defray the charges which will come in course of payment during the year ending 31st day of March 1951, in respect of 'Education.'"

Sri G. A. ACHARYA (Bangalore District General).—What is the rate of dearness allowance you are paying to the teachers in private schools? Are you paying them just the same rate which you are paying to the teachers in Government schools? Or is it just a percentage of it?

The Hon'ble Sri K. CHENGALARAYA-REDDY.—I want notice.

Mr. SPEAKER.—The question is:

"That a supplementary sum not exceeding Rs. 2,00,000 be granted to the Government to defray the charges which will come in course of payment during the ending 31st day of March 1951, in respect of 'Education.'"

The motion was adopted.

Demand No. 21—27. Agriculture and 27-A. Animal Husbandry.

The Hon'ble Sri T. MARIAPPA (Home Minister).—Sir, on the recommendation of His Highness the Maharaja, I beg to move

"That a supplementary sum not exceeding Rs. 1,02,200 be granted to the Government to defray the charges which will come in course of payment during the year ending 31st day of March 1951, in respect of 'Agriculture and Animal Husbandry.'"

Mr. SPEAKER.—Motion moved.—

"That a supplementary sum not exceeding Rs. 1,20,000 be granted to the Government to defray the charges which will come in course of payment during the year ending 31st day of March 1951, in respect of "Agriculture and Animal Husbandry.'"

Location of Agricultural College.

Sri B. HUTCHE GOWDA (Tumkur District—General).—Sir, I beg to move.

"That the demand under the head "27. Agricultnre 27-A. Animal Husbandry" for Rs. 1,02,200 be reduced by Re. 1 (to know whether a final decision has been taken to locate the Agricultural College at Hebbal)."

ಸ್ವಾಮಿ, ಈ ಡಿಮ್ಯಾಂಡ್‌ನಲ್ಲಿ Establishment of an Agricultural College at Hebbal ಎಂದಿದೆ ನಮ್ಮ ಸಂಸ್ಥಾನದಲ್ಲಿ ವ್ಯವಸಾಯದ ಕಾಲೇಜು ಪ್ರಾರಂಭವಾದ ಮೇಲೆ ಕಾಲೇಜನ್ನು ನಿರ್ದಿಷ್ಟವಾಗಿ ಇಂತಹ ಸ್ಥಳದಲ್ಲಿ ಸ್ಥಾಪಿಸಬೇಕೆಂಬುದು ಇನ್ನೂ ತೀರ್ಮಾನವಾಗಿಲ್ಲ. ಮೂರು ವರ್ಷವಾಯಿತು....

The Hon'ble Sri T. MARIAPPA.—May I respectfully draw the attention of the Chair that no grant is asked for under 'Establishment of the Agricultural College at Hebbal'? That heading is left blank.

Sri H. B. GUNDAPPA GOWDA (Hassan District—General).—You have included that heading any way.

The Hon'ble Sri T. MARIAPPA.—Not a single pie is asked for under that head, Sir.

Mr. SPEAKER.—The Hon'ble Member cannot take up all questions pertaining to the Agricultural Department under this particular Demand. The Government have not asked for any money for that service.

The Hon'ble Sri T. MARIAPPA.—Sir, I submit that the cut motion is not in order because not a single rupee is asked for under this particular head.

Mushir-ul-Mulk Janab J. MOHAMED IMAM (Chitaldrug *cum* Tumkur—Muslim).—There is a heading here as 'Contingencies.'

Sri L. SIDDAPPA (Shimoga District—General).—On page 1 there is item 3 of the Explanatory Note which says.—

"This is required to meet the cost of the electrical fittings to the class rooms."

presumbly of the Agricultural College.

Sri H. K. VEERANNA GOWDA. (Mandya District—General).—There is an Agricultural School at Hebbal. It may be for that school.

Sri L. SIDDAPPA.—Why 'may be'? Are not the Government definite about it? That it refers to the college also may be seen from the heading 'Contingencies' and the explanation is 'it is required to meet the cost of electrical fittings to class rooms.'

The Hon'ble Sri T. MARIAPPA.—Sir, kindly see that we have not asked for any money with regard to the College at all. It is under 27. Agriculture consisting of so many schemes, for example, Scientific Assistants. Agricultural Meteorology is under a different officer altogether.

Sri L. SIDDAPPA.—That is a separate item. Item No. 5 refers to Meteorology and all that. But item 3 refers to 'Contingencies' required to meet the cost of the electrical fittings to the class room.

ಶ್ರೀ ಬಿ. ಹುಚ್ಚೇಗೌಡರು.—ಅಮೇರೆ ಸಮಿತಿಯವರು ಈ ವಿಚಾರವನ್ನು ಪರಿಶೀಲನೆ ಮಾಡುವುದಕ್ಕೆ ವರ್ಷಗಟ್ಟಲೆ ಕಾಲವನ್ನು ಕಳೆದರು. ಆ ಸಮಿತಿಯವರ ತೀರ್ಮಾನವೇನಾಯಿತು, ಅವರು ಯಾವುದಾದರೂ ತೀರ್ಮಾನಕ್ಕೆ ಬಂದರೆ ಎಂಬ ವಿಚಾರವನ್ನೂ ಕಳೆದ ಅಧಿವೇಶನದಲ್ಲೂ ಕೇಳಿದ್ದಾಯಿತು. ಅಮೇರೆ ಆ ಸಮಿತಿಯಲ್ಲದ್ದ ಶ್ರೀಮಾ ಬಂದೀಗೌಡರೂ ಮತ್ತು ಇತರರೂ ಪ್ರವಾಸ ಹೊರಟು ಎಲ್ಲ ಜಿಲ್ಲೆಗಳಲ್ಲಿಯೂ ಸ್ಥಳಗಳನ್ನು ನೋಡಿಕೊಂಡು ಬಂದರು. ಈವರೆಗೂ ಆ ವಿಷಯವೇನಾಯಿತೆಂಬುದೇ ಗೊತ್ತಿಲ್ಲ. ಈಗ ನಮಗೆ ಬಂದಿರುವ ಸಂಶಯ ಒಂದಿದೆ. ಈಚೆಗೆ ಈ ಕಾಲೇಜಿಗೆ ಯಾರೂ ಸೇರುವುದಿಲ್ಲವಾದುದರಿಂದ ಇದನ್ನೇ ಮುಚ್ಚುವರೆಂಬ ವರ್ತಮಾನ ಬಂದಿದೆ. ಈ ವರ್ಷ ಇದಕ್ಕೆ ಹಣವನ್ನೊದಗಿಸಿದರೂ ಮುಂದೆ ಈ ವಿಚಾರವೇನಾಗದ್ದತ್ತದೆ ಎಂಬುದು ಗೊತ್ತಾಗುವುದಿಲ್ಲ. ಆದುದರಿಂದ ಸರ್ಕಾರದವರು ಏನಾದರೂ ತೀರ್ಮಾನ ಮಾಡಿದ್ದಾರೆಯೆ ಎಂಬುದನ್ನು ತಿಳಿಸಬೇಕು. ಹಂಗಾಮಿಯಾಗಿರುವುದಾದರೆ ಈ ಖರ್ಚು ವ್ಯಥಾ ವ್ಯರ್ಥವಾದ

(ಶ್ರೀ ಬಿ. ಹುಚ್ಚೇಗೌಡರು)

ಖರ್ಚಾಗುತ್ತದೆ. ಆದಕಾರಣ ಸರ್ಕಾರದವರು ಅಜ್ಜೆರು ತೀರ್ಮಾನಕ್ಕೆ ಬಂದಿದ್ದಾರೆಯೆ ಎಂಬುದನ್ನು ಉಚಿತವಾಗಿ ತಿಳಿಸಬೇಕು. ಇಲ್ಲವಾದರೆ class room ನ್ನೂ ಈಗ ಏಕೆ ಸರಿಮಾಡಬೇಕು? ಈ ಖರ್ಚು ಅನಾವಶ್ಯಕವೆಂದು ಹೇಳಿ ನಾನು ವಿರೋಧಿಸುತ್ತೇನೆ.

Mr. SPEAKER —Cut motion moved:

"That the demand under the head '27. Agriculture and 27-A Animal Husbandry' be reduced by the l."

